ವಿಜಯಪುರ | ಸಂಪುಟ 04 | ಸಂಚಿಕೆ 214 | ಪುಟ 08 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily ಜನಪರ-ಜೀವಪರ ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ಅಕ್ಟೋಬರ್ 17, 2026



"ಸ್ಟಿಂಗ್ ಆಪರೇಷನ್‌ಗೂ ಸಿಎಂ ಡಿ.ಕೆ. ಶಿವಕುಮಾರ್ ಅವರಿಗೂ ಏನು ಸಂಬಂಧ? ಸಿದ್ದರಾಮಯ್ಯ ಅವರನ್ನು ಒಲಿಸಿಕೊಳ್ಳುವ ಸಲುವಾಗಿ ಎಚ್.ಡಿ. ಕುಮಾರಸ್ವಾಮಿ ವ್ಯವಸ್ಥಿತವಾಗಿ, ಜೆಡಿಎಸ್ ಕಾರ್ಯಕರ್ತರ ಮೂಲಕ ಸಿ.ಡಿ ಬಿಡುಗಡೆ ಮಾಡಿ, ಇದೀಗ ಡಿ.ಕೆ ಶಿವಕುಮಾರ್ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದಾರೆ."

■ ಎನ್.ಚಲುವರಾಯಸ್ವಾಮಿ ಜಲಸಂಪನ್ಮೂಲ ಸಚಿವರು

# ದೆಹಲಿ ಸಿಜೆಪಿ ಹೋರಾಟಕ್ಕೆ ಕರ್ನಾಟಕದಿಂದ ಫಂಡಿಂಗ್!

## ರಾಜ್ಯ ಸರ್ಕಾರದಿಂದ ಪರೋಕ್ಷವಾಗಿ ಪ್ರಚೋದನೆ । ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ

ಬೆಂಗಳೂರು: ದೆಹಲಿಯಲ್ಲಿ ನಡೆಯುತ್ತಿರುವ ಸಿಜೆಪಿ ಪ್ರತಿಭಟನೆ ಹಾಗೂ ಧರಣಿಗಳಿಗೆ ಕರ್ನಾಟಕ ಸರ್ಕಾರದಿಂದಲೇ ಹಣ ರವಾನೆಯಾಗುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ನಿನ್ನೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್ ಮತ್ತು ಸಿಜೆಪಿ ಎರಡೂ ಒಂದೇ ಎಂದು ಹೇಳಿದ್ದಾರೆ. ಏನು ಬೇಕಾದರೂ ಗಲಾಟೆ ಮಾಡಿ, ನಾವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎಂದು ಪರೋಕ್ಷವಾಗಿ ಪ್ರಚೋದನೆ ನೀಡುತ್ತಿದ್ದಾರೆ ಎಂದು ದೂರಿದರು.

ತಮ್ಮ ಪರವಾಗಿ, ತಮಗೆ ಬೇಕಾದಂತೆ ಕಾನೂನನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿದರೆ ಸರ್ಕಾರ ಯಾವುದೇ ಕ್ರಮ ಜರುಗಿಸುವುದಿಲ್ಲ ಎಂದು ಹೇಳುವ ಮೂಲಕ ಹೋರಾಟಗಾರರಿಗೆ ಯಾರೂ ಹೆದರಬೇಡಿ ಎಂದು ಅಭಯ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಇತ್ತೀಚೆಗೆ ವೈರಲ್ ಆಗಿರುವ ವಿಡಿಯೋವೊಂದನ್ನು ಪ್ರದರ್ಶಿಸಿ, ತಮ್ಮ ಪರವಾಗಿ ಹೋರಾಟ ನಡೆಸುವವರ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಪ್ರಿಯಾಂಕ್ ಖರ್ಗೆ ಹೇಳಿರುವುದನ್ನು ಕುಮಾರಸ್ವಾಮಿ ಟೀಕಿಸಿದ್ದಾರೆ. ನೀವೇನು ಬೇಕಾದರೂ ಗಲಾಟೆ ಮಾಡಿ, ನಿಮ್ಮ ಮೇಲೆ ನಾವೇನು ಪೊಲೀಸ್‌ನವರು ಆ್ಯಕ್ಷನ್ ತಗೊಳ್ಳಲ್ಲ ಎಂದು ಸಿಜೆಪಿ ಪರ ಖರ್ಗೆ ಹೇಳಿಕೆ ನೀಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ.

ಅಪ್ಪಾ, ನಮ್ಮ ಗೃಹ ಸಚಿವರೇ, ನಿಮ್ಮ ಹೇಳಿಕೆ ಇದು ಎಂದು



ವಿಡಿಯೋ ಪ್ರದರ್ಶಿಸಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ಅಲ್ಲದೆ, ಸಿಜೆಪಿ ಚಟುವಟಿಕೆಗಳಿಗೆ ಫಂಡ್ಸ್ ಎಲ್ಲಾ ಇಲ್ಲಿಂದಲೇ ಹೋಗ್ತಾ ಇದೆ. ನಮ್ಮ ರಾಜ್ಯದ ಹಣವನ್ನ ಲೂಟಿ ಮಾಡಿ, ದೇಶದಲ್ಲಿ ಅಭದ್ರತೆ ಉಂಟುಮಾಡಲು ರವಾನಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಮುಖ್ಯಮಂತ್ರಿಗಳು ಪದೇ ಪದೇ ಕಾಲವೇ ಎಲ್ಲವನ್ನೂ ನಿರ್ಧಾರ ಮಾಡುತ್ತದೆ ಎಂದು ಹೇಳುತ್ತಿರುತ್ತಾರೆ. ಖಂಡಿತವಾಗಿಯೂ ಕಾಲವೇ ಎಲ್ಲವನ್ನೂ ನಿರ್ಧರಿಸಲಿದ್ದು, ಈ ಎಲ್ಲಾ ಅಕ್ರಮ ಮತ್ತು ಒಳಸಂಚುಗಳು ಸದ್ಯದಲ್ಲೇ ಜನರ ಮುಂದೆ ಬಯಲಾಗಲಿವೆ ಎಂದು ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

### ಸ್ಟಿಂಗ್ ಆಪರೇಷನ್ ಹಿಂದೆ ಸಚಿವರಾದ ಜಮೀರ್ & ಪ್ರಿಯಾಂಕ್ ಖರ್ಗೆ ಕೈವಾಡವಿರಬಹುದು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಅವರನ್ನು ಗುರಿಯಾಗಿಸಿಕೊಂಡು ನಡೆದಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಹಿಂದೆ ಸಚಿವರಾದ ಜಮೀರ್ ಅಹ್ಮದ್ ಖಾನ್ ಮತ್ತು ಪ್ರಿಯಾಂಕ್ ಖರ್ಗೆ ಅವರ ಕೈವಾಡವಿರಬಹುದು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಶಂಕಿಸಿದ್ದಾರೆ.



ಕುಮಾರಸ್ವಾಮಿಯವರೇ ಸ್ಟಿಂಗ್ ವಿಡಿಯೋ ಮಾಡಿಸಿರಬಹುದು ಎಂಬ ಜಮೀರ್ ಅಹ್ಮದ್ ಆರೋಪಕ್ಕೆ ತಿರುಗೇಟು ನೀಡಿದ ಅವರು, ಸಿದ್ದರಾಮಯ್ಯನವರು ಆರಂಭದಲ್ಲಿ ಜಮೀರ್‌ಗೆ ಸಚಿವ ಸ್ಥಾನ ನೀಡಬಾರದು ಎಂದು ಯಾಕೆ ಹಠ ಹಿಡಿದಿದ್ದರು? ಯಾಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು ಎಂದು ಪ್ರಶ್ನಿಸಿದ್ದಾರೆ.

ಮೊನ್ನೆ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗಿದ್ದೇ ಜಮೀರ್ ಅಹ್ಮದ್ ಅವರನ್ನು ಸಂಪುಟದಿಂದ ಕೈಬಿಡುವಂತೆ ಹೈಕಮಾಂಡ್‌ಗೆ ತಿಳಿಸಲು ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿವೆ. ಈ ವಿಷಯ ಜಮೀರ್ ಗಮನಕ್ಕೆ ಬಂದಿದ್ದರಿಂದ, ತಾವೇ ಖುದ್ದಾಗಿ ಸ್ಟಿಂಗ್ ಆಪರೇಷನ್ ಟೀಂ ಜೊತೆ ಕೈಜೋಡಿಸಿ ಈ ವಿಡಿಯೋ ಬಿಡುಗಡೆ ಮಾಡಿಸಿರಬಾರದು ಯಾಕೆ ಎಂದು ಪ್ರಶ್ನಿಸಿದರು. ಈ ಬಗ್ಗೆ ತಮಗೆ ಪ್ರತ್ಯೇಕ ವರದಿಗಳು ಲಭ್ಯವಾಗುತ್ತಿದ್ದು, ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಿರುವುದಾಗಿ ಹೇಳಿದರು.

ಸಿದ್ದಾರ್ಥ ಟ್ರಸ್ಟ್ ವಿಷಯದಲ್ಲಿ ಮೋದಿ ಹತ್ರ ಮಲ್ಲಿಕಾರ್ಜುನ್ ಖರ್ಗೆ ಯಾಕೆ ಹೋಗಿದ್ರು ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಗೃಹ ಸಚಿವರ ಈ ಹೇಳಿಕೆಯು ಕಾನೂನು ಸುವ್ಯವಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

# ಎಸ್‌ಐಆರ್ ಪ್ರಕ್ರಿಯೆ ರದ್ದುಪಡಿಸಲು ಆಗ್ರಹಿಸಿ ಡಿಎಸ್ಎಸ್ ಮನವಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೇಂದ್ರದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ ರವರನ್ನು ವಜಾಗೊಳಿಸಬೇಕು. ಮತ್ತು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಾ.ಡಿ ಜಿ ಸಾಗರ ಬಣ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾ ಅಧಿಕಾರಿಗಳ ಕಚೇರಿ ಆವರಣದಲ್ಲಿ ಧರಣಿ ನಡೆಸಿ ಜಿಲ್ಲಾ ಅಧಿಕಾರಿಗಳಾದ ಡಾ.ಆನಂದ ಕೆ ಅವ-ರಿಂದ ಗೌರವಾನ್ವಿತ ರಾಷ್ಟ್ರಪತಿಗಳು ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿದ್ದು ರಾಯಣ್ಣನವರ ಮಾತನಾಡಿ, ಮತದಾನದ ಹಕ್ಕು-1965 ರ ಕಾಯ್ದೆ ಪ್ರಕಾರವೇ ಗುರುತಿನ ಚೀಟಿ ನೀಡುವ ಅಥವಾ ರದ್ದುಪಡಿಸುವ ಪ್ರಕ್ರಿಯೆ ನಡೆಯಬೇಕು. ಎಸ್.ಐ.ಆರ್ ಬಗೆಗಿನ ತೀರ್ಮಾನಗಳನ್ನು ಮುಖ್ಯ ಚುನಾವಣಾ ಆಯುಕ್ತರು ಜ್ಞಾನೇಶಕುಮಾರ, ಉಳಿದ ಇಬ್ಬರೂ ಆಯುಕ್ತರನ್ನು ಕತ್ತಲಲ್ಲಿ ಇಟ್ಟು ಕಾನೂನು ಬಾಹೀರವಾಗಿ ಮತ್ತು ಏಕಪಕ್ಷೀಯವಾಗಿ ಕ್ರಮ ಕೈಗೊಂಡಿರುವುದರಿಂದ ಎಸೈಆರ್ ಅನ್ನು ರದ್ದುಗೊಳಿಸಬೇಕು. ಆಯುಕ್ತ ಜ್ಞಾನೇಶಕುಮಾರನ್ನು ವಜಾಗೊಳಿಸಬೇಕು. ಎಸೈಆರ್ ಪ್ರಕ್ರಿಯೆಯಿಂದಾಗಿ ದೇಶದಲ್ಲಿ ಒಟ್ಟು 13 ಕೊಟ್ಟಿಕ್ಕಿಂತಲೂ ಹೆಚ್ಚು ಮತದಾರರ ಮತದಾನ ಹಕ್ಕನ್ನು ಮೊಟಕುಗೊಳಿಸಲಾಗಿದೆ. ಕಾರಣ ಎಸ್.ಐ.ಆರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಮೇಶ ಧರಣಾಕರ ಸಂ ಸಂಚಾಲಕರು ಮಹಾಂತೇಶ ಸಾಸಬಾಳ ಜಿಲ್ಲಾ ಮುಖಂಡರು ಸುನೀಲ ನಾಗಠಾಣ ಶಿವು ಗಣಿಯಾರ ನಾಗೇಶ್ ರೆಡ್ಡಿ ದುಂಡು ಬಾಣಿ ಗೌರೇಶ್ ಬಾಣಿ ಅವಿನಾಶ್ ಬಾನಿಕೋಲ ವಿನೋದ ನಾಗಾವಿ ಪರಮೇಶ್ವರ್ ಸಿಂಗೆ ದೇವೇಂದ್ರ ಬಾವಿಮನಿ ಪರಮೇಶ್ ಇಂಗಳೇಶ್ವರ ಚಂದ್ರಶೇಖರ್ ಮಲಕಣ್ಣವರ ಉಮಾಕಾಂತ ರಾಮಣ್ಣ ಮುದ್ದೇಬಿಹಾಳ ಆಕಾಶ ಹಿಪ್ಪರಗಿ ವಿಶ್ವನಾಥ ದೊಡಮನಿ ದುಂಡಪ್ಪ ನಾಟೀಕಾರ ಮಕ್ದುಮಸಾಬ ಪೀರಾಬಗೂಳ ಮತ್ತಿತರರು ಉಪಸ್ಥಿತರಿದ್ದರು.

# 3,894.13 ಕ್ವಿಂಟಲ್ ಅಕ್ಕಿ-95.1 ಕ್ವಿಂಟಲ್ ಗೋಧಿ ವಶ

■ ಉದಯರಶ್ಮಿ ದಿನಪತ್ರಿಕೆ

**ಪಡಿತರ ಧಾನ್ಯಗಳ ಅಕ್ರಮ ತಡೆಗೆ ಜಿಲ್ಲಾಡಳಿತದಿಂದ ಕ್ರಮ । 45 ಪ್ರಕರಣ ದಾಖಲು**

ವಿಜಯಪುರ: ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸುವ ಪಡಿತರ ಧಾನ್ಯಗಳ ಅಕ್ರಮ ಸಾಗಣೆ, ಸಂಗ್ರಹಣೆ ಹಾಗೂ ದುರುಪಯೋಗ ತಡೆಗಟ್ಟುವ ನಿಟ್ಟಿನಲ್ಲಿ ವಿಜಯಪುರ ಜಿಲ್ಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಜನವರಿ 2026ರಿಂದ ಅಕ್ಟೋಬರ್ 2026ರವರೆಗೆ ಒಟ್ಟು 45 ಪ್ರಕರಣಗಳನ್ನು ದಾಖಲಿಸಿ, 3,894.13 ಕ್ವಿಂಟಲ್ ಪಡಿತರ ಅಕ್ಕಿ ಹಾಗೂ 95.1 ಕ್ವಿಂಟಲ್ ಗೋಧಿ ವಶಪಡಿಸಿಕೊಳ್ಳಲಾಗಿದೆ.

ವಶಪಡಿಸಿಕೊಂಡ ಪಡಿತರ ಅಕ್ಕಿಯ ಅಂ-ದಾಜು ಮೌಲ್ಯ 93,91,104 ಹಾಗೂ ಗೋಧಿಯ ಮೌಲ್ಯ 2,42,505 ಆಗಿದೆ. ಪಡಿತರ ಧಾನ್ಯಗಳ ಅಕ್ರಮ ಸಾಗಣೆ ಮತ್ತು ದುರುಪಯೋಗಕ್ಕೆ ಸಂಬಂಧಿಸಿದಂತೆ ಅಗತ್ಯ ವಸ್ತುಗಳ ಕಾಯ್ದೆ-1955ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಅಕ್ರಮ ಸಾಗಣೆ ಹಾಗೂ ಮಾರಾಟಕ್ಕೆ ಬಳಸುತ್ತಿದ್ದ ಲಾರಿಗಳು, ಟ್ರಕ್‌ಗಳು, ಟಾಟಾ ಏಸ್, ಬಜಾಜ್ ಮ್ಯಾಕ್ಸಿಮೊ ಸೇರಿದಂತೆ ವಿವಿಧ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಒಟ್ಟು ಅಂ-ದಾಜು ಮೌಲ್ಯ 2.10 ಕೋಟಿ ಎಂದು ತಿಳಿಸಿದ್ದಾರೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಅರ್ಹ ಫಲಾನುಭವಿಗಳಿಗೆ ತಲುಪಬೇಕಾದ ಪಡಿತರ ಧಾನ್ಯಗಳನ್ನು ಅಕ್ರಮವಾಗಿ ಸಂಗ್ರಹಿಸುವುದು, ಸಾಗಣೆ ಮಾಡುವುದು ಅಥವಾ ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಾನೂನುಬಾಹಿರವಾಗಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಪಡಿತರ ಧಾನ್ಯಗಳ ಅಕ್ರಮ ಮಾರಾಟ ಅಥವಾ ಸಾಗಣೆ ಕಂಡುಬಂದಲ್ಲಿ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಅಕ್ರಮ ತಡೆಗೆ ಸಹಕರಿಸಬೇಕು ಎಂದು ಆಹಾರ ಇಲಾಖೆಯ ಉಪನಿರ್ದೇಶಕ ವಿನಯಕುಮಾರ ಪಾಟೀಲ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಅಂತರಂಗದ ರಾಕ್ಷಸ ನಾಶವೇ ವಿಜಯದಶಮಿ

## ಇಂಡಿಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಸಂಸ್ಕಾರ ಕ್ಷೀಣಿಸುತ್ತಿದ್ದು ಅಭಿವೃದ್ಧಿ ಹೆಸರಿನಲ್ಲಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ಅತೀ ಬಳಕೆಯಿಂದ ಮನುಷ್ಯರ ನಡುವೆ ಅಂತರ ಹೆಚ್ಚುತ್ತಿದೆ. ನವರಾತ್ರಿಯಂತಹ ಹಬ್ಬಗಳು ಸಂಸ್ಕೃತಿ ರಕ್ಷಣೆಗೆ ಪ್ರೇರಣೆಯಾಗಬೇಕಿದೆ. ಅಂತರಂಗದ ರಾಕ್ಷಸನ ಸಂಹಾರವಾಗುವದೇ ನಿಜವಾದ ವಿಜಯದಶಮಿ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ನಗರದ ಕುಂಬಾರ ಓಣಿಯಲ್ಲಿ ದಸರಾ ಆರನೆಯ ದಿನದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.



ಕ್ರೀಯಾ ಶಕ್ತಿ, ಇಚ್ಛಾ ಶಕ್ತಿ ಮತ್ತು ಜ್ಞಾನ ಶಕ್ತಿಯ ತ್ರಿವೇಣಿ ಸಂಗಮದ ಮೂಲಕ ಆಧ್ಯಾತ್ಮಿಕ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ ಮಾತನಾಡಿ ನನ್ನ ವೃತ್ತಿಯ ಯಶಸ್ಸಿಗೆ ಸಾದನೆಗೆ ಪರಿಶ್ರಮದ ಜೊತೆಗೆ ಭಕ್ತಿ ಧ್ಯಾನವೂ ಕಾರಣ, ಮನುಷ್ಯನಿಗೆ ಆಧ್ಯಾತ್ಮ ಬಲ ವಿದ್ದರೆ ಎಲ್ಲ ಕಾರ್ಯ ಮಾಡಲು ಸಾದ್ಯ ಆಗುತ್ತದೆ ಎಂದರು.

ಮಲ್ಲನಗೌಡ ಪಾಟೀಲ, ಶ್ರೀಕಾಂತ ಕುಡಿಗನೂರ, ಶಾಂತ ದೇವರ, ದೇವೆಂದ್ರ ಕುಂಬಾರ, ಚೆನ್ನು ದೇವರ, ಸುರೇಶ ಕುಂಬಾರ, ರಮೇಶ ಕಂಬಾರ, ರಾಘವೇಂದ್ರ ಕುಡಿಗನೂರ, ಕುಡಲಪ್ಪ ಕುಂಟೋಜಿ, ಶಿವಾನಂದ ಬೋಡಿ, ಶಾಂತಪ್ಪ ಐರೋಳಿ ಮತ್ತಿತರಿದ್ದರು.

# ಕಾಂಗ್ರೆಸ್ ನಿಂದ ದಲಿತ ಬಾಂಧವರ ಬಗ್ಗೆ ಮೊಸಳೆ ಕಣ್ಣೀರು

## ವಿಜಯಪುರದಲ್ಲಿ ಸಂಸದ ರಮೇಶ ಜಿಗಜಿಣಗಿ ಅವರಿಂದ ಪತ್ರಿಕಾಗೋಷ್ಠಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರುವುದಕ್ಕೆ ನಿಮಗೇನು ತೊಂದರೆ? ಕೇವಲ ದಲಿತ ಬಾಂಧವರ ಬಗ್ಗೆ ನಿಮ್ಮ ಮೊಸಳೆ ಕಣ್ಣೀರು ಸಾಕು ಎಂದು ಸಂಸದ ರಮೇಶ ಜಿಗಜಿಣಗಿ ಖಾರವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕೆಗಳ ಸುರಿಮಳೈಗೈದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಸಮರ್ಥವಾಗಿ ವಾದ ಮಂಡಿಸಿ ಹೈಕೋರ್ಟ್‌ಗೆ ಮೀಸಲಾತಿ ಪ್ರಮಾಣ ಏರಿಕೆಯ ವಿಷಯವನ್ನು ಮನವರಿಕೆ ಮಾಡಿಕೊಡುವಲ್ಲಿ ಸಂಪೂರ್ಣ ವಿಫಲವಾಗಿದೆ, ಈಗ ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲು ವಿಳಂಬ ಮಾಡುತ್ತದೆ, ಅಲ್ಲಿಯೂ ಇದೇ ರೀತಿ ತನ್ನ ಛಾಳಿ ಮುಂದುವರೆಸಿ ಪರಿಶಿಷ್ಟ ಜಾತಿಯವರನ್ನು ಯಾಮಾರಿಸುವುದನ್ನು ಬಿಡಬೇಕು ಎಂದು ಜಿಗಜಿಣಗಿ ಗುಡುಗಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಿಸಿರುವ ಈ ಹಿಂದಿನ ಬಿಜೆಪಿ ಸರ್ಕಾರದ ಕ್ರಮ ಅಸಾಂವಿಧಾನಿಕ ಎಂದು ಆದೇಶಿಸಿರುವ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತ ಪರವಾದ ತನ್ನ ಬದ್ಧತೆ ಹಾಗೂ ನಿಲುವು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರು.

ಈ ಹಿಂದೆ 2022ರಲ್ಲಿ ಬಿಜೆಪಿ ಸರ್ಕಾರ ವಿಶೇಷ ಕಾಯ್ದೆಯ ಮೂಲಕ ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲಾತಿಯನ್ನು ಶೇ. 15 ರಿಂದ ಶೇ. 17ಕ್ಕೆ ಹಾಗೂ ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿಯನ್ನು ಶೇ. 3 ರಿಂದ ಶೇ. 7ಕ್ಕೆ ಹೆಚ್ಚಿಸಿ ತನ್ನ ಬದ್ಧತೆ ಮತ್ತು ಕಾಳ-ಜಿಯನ್ನು ಪ್ರದರ್ಶಿಸಿತ್ತು. ಆದರೆ, ಅದನ್ನು ಖಂಡಿಸಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪೂರಕವಾಗಿ ಪ್ರಕರಣ ಮುನ್ನಡೆಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಪರಿಣಾಮ ಹೈಕೋರ್ಟ್ ಈ ಕ್ರಮ ಅಸಂವಿಧಾನಿಕ ಎಂದು ಘೋಷಿಸಿ ಈ ಹೆಚ್ಚಳದ ಆದೇಶ ರದ್ದುಗೊಳಿಸಿದೆ.

### ಮೀಸಲಾತಿ ಯಾವ ಕಾಲಕ್ಕೂ ತೆಗೆಯಲ್ಲ

ವಿಜಯಪುರ: ಮೀಸಲಾತಿ ಯಾವ ಕಾಲಕ್ಕೂ ತೆಗೆಯುವುದಿಲ್ಲ, ತೆಗೆದರೆ ನಾವು ಬಿಜೆಪಿಯಲ್ಲಿ ಇರಲ್ಲ, ಮೀಸಲಾತಿ ತೆಗೆಯುತ್ತಾರೆ ಎಂದು ಕಾಂಗ್ರೆಸ್ ಸುಳ್ಳು ಹೇಳಿ ದಲಿತ ಬಾಂಧವರ ದಿಕ್ಕು ತಪ್ಪಿಸುತ್ತಿದೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ವಿರೋಧಿ ಹೋರಾಟ ನಡೆಸುತ್ತಿರುವವರಿಗೆ ಬುದ್ಧಿ ಇಲ್ಲ ಅವುಗಳಿಗೆ ನಾವು ಸೊಪ್ಪು ಹಾಕಲ್ಲ. ಅಷ್ಟೂ ಮೀರಿ ಮೀಸಲಾತಿಯನ್ನು ಬಿಜೆಪಿ ಸರ್ಕಾರ ತೆಗೆಯುವ ಯೋಚನೆಯೇ ಮಾಡಿಲ್ಲ, ಅಂತಹ ಚಿಂತನೆಯೂ ಇಲ್ಲ. ಒಂದು ವೇಳೆ ಮೀಸಲಾತಿ ತೆಗೆದರೆ ನಾವೇಕೆ ಇಲ್ಲಿರಬೇಕು, ನಾವು ಹೊರಬರುತ್ತವೆ, ಇದು ಮಾಧ್ಯಮದ ಮುಂದೆ ಅಲ್ಲ ಬಿಜೆಪಿ ವರಿಷ್ಠರ ಮುಂದೆಯೇ ನಾನು ಹೇಳಿರುವೆ, ಮೀಸಲಾತಿ ತೆಗೆದರೆ ನಾವು ಇಲ್ಲಿ ಇರುವುದೇ ಇಲ್ಲ ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿರುವೆ ಎಂದು ಜಿಗಜಿಣಗಿ ಹೇಳಿದರು.

'ನಾನು ಸಂಸದನಾಗಿರುವೆ, ಕೇಂದ್ರ ಸಚಿವನಾಗಿರುವೆ, ರ್ರೀ...ಸಾಹೇಬ್ರ ಎನ್ನುತ್ತಾರೆ, ಕುರ್ಚಿ ಹಾಕಿ ಕೂಡಿಸುತ್ತಾರೆ, ಗೌರವಿಸುತ್ತಾರೆ, ಆದರೆ ನನ್ನ ಜನ ಅವರನ್ನು ಇಂದಿಗೂ ದೂರದಲ್ಲಿಯೇ ಕೂರಿಸುತ್ತಾರೆ, ಈ ವ್ಯವಸ್ಥೆ ಇನ್ನೂ ಬದಲಾಗಿಲ್ಲ ಎಂದು ಸಂಸದ ಜಿಗಜಿಣಗಿ ಈ ವಿಷಯ ಹೇಳುವಾಗ ಭಾವನಾತ್ಮಕವಾದರು.

ನೋವಿನಿಂದಲೇ ಈ ವಿಷಯವನ್ನು ಉಲ್ಲೇಖಿಸುತ್ತಾ ಸಾಗಿದ ಜಿಗಜಿಣಗಿ, ನಮ್ಮ ಜನರನ್ನು ಇಂದಿಗೂ ಏಕವಚನದಲ್ಲಿಯೇ ಕರೆಯುತ್ತಾರೆ, ಕುರ್ಚಿ ಸಹ ಕೊಡುವುದಿಲ್ಲ, ಈ ವ್ಯವಸ್ಥೆ ಬದಲಾಗಲು ಮೀಸಲಾತಿ ಇದೆ, ಇದು ಇದ್ದೇ ಇರುತ್ತದೆ, ಮೀಸಲಾತಿ ತೆಗೆದರೆ ನಾನು ಅಲ್ಲಿರುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುವೆ, ಇದರಲ್ಲಿ ಯಾವ ಅಳುಕಿಲ್ಲ ಎಂದು ಜಿಗಜಿಣಗಿ ಹೇಳಿದರು.

ಇದಕ್ಕೆ ಕಾಂಗ್ರೆಸ್ ಪಕ್ಷದ ಅಸಮರ್ಪಕ, ಅವೈಜ್ಞಾನಿಕ ಹಾಗೂ ತಾತ್ಸಾರ ಮತ್ತು ನಿರ್ಲಕ್ಷಿತ ಧೋರಣೆಯೇ ಕಾರಣ ಎಂದು ಜಿಗಜಿಣಗಿ ದೂರಿದರು.

### ಬೆಳಗ್ಗೆ ದಲಿತ, ಮಧ್ಯಾಹ್ನ ಅಲ್ಪಸಂಖ್ಯಾತ, ಸಂಜೆ ಹಿಂದುಳಿದ ವರ್ಗ

ಬಿಜೆಪಿಯ ಈ ನಿರ್ಧಾರ ಅಸಾಂವಿಧಾನಿಕ ಎನ್ನುವವರು ಇತರೆ ರಾಜ್ಯಗಳಲ್ಲಿ ಈಗಾಗಲೇ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕಿಂತ ಹೆಚ್ಚಿಸಿರುವುದನ್ನು ಮನಗಾಣಬೇಕು. ತಮಿಳುನಾಡು ಸೇರಿ ವಿವಿಧ ರಾಜ್ಯಗಳಲ್ಲಿ ಮೀಸಲಾತಿಯ ಗಡಿ ಶೇ.50 ದಾಟಿದೆ. ಈ ವಿಷಯವನ್ನು ನ್ಯಾಯಾಲಯಕ್ಕೆ ಕಾಂಗ್ರೆಸ್ ಮನವ-ರಿಕೆ ಮಾಡಿಕೊಡುವ ಪ್ರಯತ್ನ ಮಾಡಲಿಲ್ಲ ಎಂದರು. ಮಾತೆತ್ತಿದರೆ ಕಾಂಗ್ರೆಸ್‌ನವರು ದಲಿತ ಪರ ಎಂದು ಭಾಷಣ ಬಿಗಿಯುತ್ತಾರೆ. ಮುಂಜಾನೆ ದಲಿತ, ಮಧ್ಯಾಹ್ನ ಅಲ್ಪಸಂಖ್ಯಾತ, ಸಂಜೆ ಹಿಂದುಳಿದ ವರ್ಗ ಎಂದು ಭಾಷಣ ಬಿಗಿಯುವ ಕಾಂಗ್ರೆಸ್ಸಿಗರು ಇದೀಗ ಹೈಕೋರ್ಟ್ ಆದ-ೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬೇಕಲ್ಲವೇ ಎಂದು ಜಿಗಜಿಣಗಿ ಗುಡುಗಿದರು.

# ದಸರಾ - ಶಕ್ತಿಯ ಆರಾಧನೆ

■ ಉದಯರಶ್ಮಿ ದಿನಪತ್ರಿಕೆ

ದಸರಾ ಕೇವಲ ಒಂದು ಹಬ್ಬವಲ್ಲ ಇದು ಭಾರತೀಯ ಸಂಸ್ಕೃತಿಯ ಪ್ರತಿಕ ಶಕ್ತಿ ಆರಾಧನೆ ಹಾಗೂ ವಿಜಯದ ಸಂಕೇತ ಪ್ರತಿಯೊಂದು ಹಬ್ಬದ ಹಿಂದೆ ಅದರದ್ದೇ ಆದ ಒಂದು ಪೌರಾಣಿಕ ಹಿನ್ನೆಲೆ ಸಾಂಸ್ಕೃತಿಕ ಪರಂಪರೆ ಹಾಗೂ ಜೀವನ ಸಂದೇಶವನ್ನು ಹೊಂದಿದೆ ಈ ನಿಟ್ಟಿನಲ್ಲಿ ದಸರ ಹಬ್ಬ ಹತ್ತು ಹಲವಾರು ವಿಶೇಷತೆಗಳನ್ನು ಒಳಗೊಂಡಿದೆ.

ದಸರಾ ಎಂದಕ್ಷಣ ನವರಾತ್ರಿಯ ಒಂಭತ್ತು ದಿನಗಳ ಉತ್ಸವದಲ್ಲಿ ಒಂಭತ್ತು ದೇವಿಯರ ಆರಾಧನೆ, ಸಾಂಸ್ಕೃತಿಕ ಕಾರ್ಯಕ್ರಮ, ವರ್ಣರಂಜಿತ ದೀಪಾಲಂಕಾರ, ವಿಜಯದಶಮಿ ವೈಭವ, ಭಜನೆ, ಪೂಜೆ ಹಾಗೂ ಎಲ್ಲೆಡೆ ಭಕ್ತಿ ಭಾವದ ಸಂಚಲನ ಕಣ್ಣ ಮುಂದೆ ಬರುತ್ತದೆ. ಈ ಹಬ್ಬದ ನಿಜವಾದ ಅರ್ಥವೇ ಶಕ್ತಿಯ ಆರಾಧನೆಯಿಂದ ಮನಸ್ಸನ್ನು ಶುದ್ಧಿಗೊಳಿಸುವುದು.

### ನವರಾತ್ರಿ ಹಿನ್ನಲೆ

ಹಿಂದೂ ಪುರಾಣದ ಪ್ರಕಾರ ಮಹಿಷಾಸುರನೆಂಬ ರಾಕ್ಷಸನು ಘೋರ ತಪಸ್ಸನ್ನು ಮಾಡಿ ಬ್ರಹ್ಮದೇವನಿಂದ ಯಾವುದೇ ಪುರುಷನಾಗಲಿ, ಪ್ರಾಣಿಗಳಿಂದಾಗಲಿ, ದೇವತೆಗಳಿಂದಾಗಲಿ ಸಾವು




ಬಾರದೆನ್ನುವ ವರವನ್ನು ಪಡೆದನು. ಹೆಣ್ಣು ಮಕ್ಕಳು ಅಬಲೆಯರು ಅವರಿಂದ ಏನು ಮಾಡಲು ಸಾಧ್ಯವಿಲ್ಲ ಹಾಗಾಗಿ ಪ್ರಾಣಕ್ಕೆ ಆಪತ್ತು ಬಾರದು ಎನ್ನುವ ಅಹಂಕಾರದಿಂದ ದೇವತೆಗಳನ್ನು ಸೋಲಿಸಿ ಮೂರು ಲೋಕದಲ್ಲಿ ಕ್ರೌರ್ಯವನ್ನು ಮೆರೆದಿದ್ದನು. ಆಗ ಎಲ್ಲಾ ದೇವತೆಗಳು ತಮ್ಮ ದಿವ್ಯ ಶಕ್ತಿ ಮತ್ತು ತೇಜಸ್ಸಿನ ಪ್ರಭಾವದಿಂದ ದುರ್ಗಾದೇವಿಯ ಅವತಾರ ವಾಯಿತು. ಎಲ್ಲಾ ದೇವತೆಗಳು ತಮ್ಮ ಆಯುಧಗಳನ್ನು ದೇವಿಗೆ ಹಸ್ತಾಂತರಿಸಿ ಯುದ್ಧಕ್ಕೆ ಸಿದ್ಧಗೊಳಿಸಿದರು. ದೇವಿಯು ಸಿಂಹವಾಹಿನಿಯಾಗಿ 9 ದಿನಗಳ ಕಾಲ ಯುದ್ಧ ಮಾಡಿ ಹತ್ತನೆಯ ದಿನದಂದು ಮಹಿಷಾಸುರನನ್ನು ಸಂಹರಿಸಿದಳು. ಆ ಪುಣ್ಯದಿನವನ್ನು ವಿಜಯದಶಮಿಯ ದಿನವಾಗಿ ಆಚರಿಸಲಾಗುತ್ತಿದೆ.

ಅಯೋಧ್ಯೆಯ ರಾಜನಾದ ಶ್ರೀ ರಾಮನು ಸೀತಾ ಮಾತೆಯ ಅಪಹರಣದ ಹಿನ್ನಲೆಯಲ್ಲಿ ನಂಕಾಧಿಪತಿ ರಾವಣನನ್ನು ವದಿಸಲು ನವರಾತ್ರಿಯ 9 ದಿನಗಳ ಕಾಲ ತಾಯಿ ತುರ್ಕೆಯನ್ನು ಆರಾಧಿಸಿ ನಂತರ ಹತ್ತನೆಯ ದಿನದಂದು ರಾವಣನನ್ನು ರಾವಣನನ್ನು ದೇವಿಯ ಅನುಗ್ರಹದಿಂದ ಸಂಹರಿಸಿದನು. ಹಾಗಾಗಿ ಉತ್ತರ ಭಾರತದಲ್ಲಿ ವಿಜಯ ದಶಮಿ ದಿನದಂದು ರಾವಣ ಪ್ರತಿಕೃತಿಯನ್ನು ಸುಡುವ ಪದ್ಧತಿ ಇದೆ. ಮಹಾಭಾರತದ ಪ್ರಕಾರ ಪಾಂಡವರು ತಮ್ಮ ಆಜ್ಞಾತವಾಸದ ಸಂದರ್ಭದಲ್ಲಿ ತಮ್ಮ ಆಯುಧಗಳನ್ನು ಶಮಿ ಮರದ ಮೇಲೆ ಬಚ್ಚಿಟ್ಟಿದ್ದರು. ಹದಿಮೂರು ವರ್ಷದ ಆಜ್ಞಾತವಾಸ ಮುಗಿದ ನಂತರ ವಿಜಯ ದಶಮಿಯಂದು ಆಯುಧಗಳನ್ನು ಮರದಿಂದ ಹೊರಗೆ ತೆಗೆದು ಅದನ್ನು ಭಕ್ತಿಯಿಂದ ಪೂಜಿಸಿ ವಿಜಯವನ್ನು ಸಾಧಿಸಿದರು.

### ಶಕ್ತಿಯ ಆರಾಧನೆ



ನವರಾತ್ರಿಯ 9 ದಿನಗಳು ದೇವಿಯ ವಿವಿಧ ರೂಪಗಳನ್ನು ಆರಾಧಿಸಲಾಗುತ್ತದೆ. ಈ ಆಚರಣೆಯು ಧಾರ್ಮಿಕ ಆಚರಣೆ ಮಾತ್ರವಲ್ಲ, ನಮ್ಮೊಳಗಿನ ದುರ್ಗುಣಗಳನ್ನು ತೊರೆದು ಶಕ್ತಿಯನ್ನು ಜಾಗೃತಗೊಳಿಸುವ ಪರ್ವಕಾಲ. ಅಧರ್ಮಗಳ ಅಧರ್ಮ ಅಧರ್ಮವು ಎಷ್ಟೇ ಅಧಿಪತ್ಯ ಸಾಧಿಸಿದರು ಧರ್ಮ ಹಾಗೂ ಸತ್ಯದ ಮುಂದೆ ಅದು ಎಂದಿಗೂ ಸೋಲಲೇಬೇಕು ಎನ್ನುವ ಮಹತ್ವವಾದ ಸಂದೇಶವನ್ನು ದಸರಾ ಹಬ್ಬ ಸೂಚಿಸುತ್ತದೆ. ವಾಸ್ತವವಾಗಿ ಈ ಹಬ್ಬವು ಸ್ತ್ರೀ ಶಕ್ತಿಯ ಮಹತ್ವವನ್ನು ನೆನಪಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಶಿಕ್ಷಣ,ಕಲೆ, ವಿಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಾ ಶಕ್ತಿಯ ರೂಪವಾಗಿ ಕಾಣುತ್ತಾಳೆ ಅದೇ ರೀತಿ ಮನೆಯಲ್ಲಿರುವ ತಾಯಿ, ಅಕ್ಕ,ತಂಗಿ, ಹೆಂಡತಿ, ಮಗಳು ಎಲ್ಲರೂ ಶಕ್ತಿಯ ಪ್ರತಿರೂಪವೇ ಆಗಿರುತ್ತಾರೆ. ಅವರನ್ನು ಗೌರವಿಸುವುದು ಹಾಗೆಯೇ ಸುತ್ತಮುತ್ತಲಿನ ಹೆಣ್ಣಿನ ಶಕ್ತಿಯನ್ನು ಗುರುತಿಸಿ ಗೌರವಿಸುವುದಲ್ಲದೇ ಹೆಣ್ಣು ಅಬಲೆಯಲ್ಲ ಸಬಲೆ ಎನ್ನುವ ಸಂದೇಶ ಸಾರುವ ಹಬ್ಬವೇ ಈ ದಸರಾ.

ದಸರಾ ಎಂದರೆ ಕೇವಲ ಗೊಂಬೆಯನ್ನು ಕೂರಿಸುವುದು ಬಣ್ಣದ ಬಟ್ಟೆಯನ್ನು ತೊಟ್ಟು ಸಂಭ್ರಮ ಪಡುವುದು ಮಾತ್ರವಲ್ಲ. ತನ್ನೊಳಗಿನ ದುರ್ಬಲತೆಯನ್ನು ಗೆದ್ದು ತಾನು ಶಕ್ತಿ ಸ್ವರೂಪಳೆಂದು ಅರಿವಾಗುವ ಪರ್ವಕಾಲ. ಅದೇ ರೀತಿ ದುಷ್ಟ ಶಕ್ತಿಗಳ ವಿರುದ್ಧ ದೈವ ಶಕ್ತಿಗಳ ವಿಜಯವನ್ನು ಸಂಭ್ರಮಿಸುವುದು ಮಾತ್ರವಲ್ಲ ನಮ್ಮೊಳಗೆ ನಮ್ಮೊಳಗಿನ ಕೆಟ್ಟ ಆಲೋಚನೆಗಳ ವಿರುದ್ಧ ಒಳ್ಳೆ ಆಲೋಚನೆಗಳು ಗೆಲುವು ಸಾಧಿಸಬೇಕೆಂಬ ಸಂಕಲ್ಪ ಮಾಡುವ ದಿನ. ಶಕ್ತಿಯ ಆರಾಧನೆಯಿಂದ ನಮ್ಮೊಳಗೆ ಆತ್ಮವಿಶ್ವಾಸ, ಅನ್ಯಾಯವನ್ನು ಎದುರಿಸುವ ಧೈರ್ಯ ಹಾಗೆಯೇ ಬದುಕಿನಲ್ಲಿ ಕುಗ್ಗಿದಾಗ ಪ್ರೇರಣೆಯನ್ನು ನೀಡುತ್ತದೆ. ಈ ದಸರವು ಪ್ರತಿಯೊಬ್ಬರ ಜೀವನದಲ್ಲಿ ಸನ್ಮಂಗಳವನ್ನು ಉಂಟು ಮಾಡಲಿ, ಸತ್ಯಕ್ಕೆ ಜಯವಾಗಲಿ, ಧರ್ಮದ ರಕ್ಷಣೆ ಆಗಲಿ.





ಆಶಾ ಅಡೂರ್.
ಕಡಿರುದ್ದಾವರ
ದಕ್ಷಿಣ ಕನ್ನಡ ಜಿಲ್ಲೆ

# ಜಂಬಗಿ, ಆಹೇರಿ, ಮಾದಾಳ, ಹುಣಶ್ಯಾಳ, ಅಂಕಲಗಿ ಕೆರೆಗಳನ್ನು ತುಂಬಿಸಿ

■ ಉದಯರಶ್ಮಿ ದಿನಪತ್ರಿಕೆ



**ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರಿಗೆ ಮನವಿ**

ವಿಜಯಪುರ: ತಾಲೂಕಿನ ಜಂಬಗಿ, ಆಹೇರಿ, ಮಾದಾಳ, ಹುಣಶ್ಯಾಳ, ಅಂಕಲಗಿ ಕೆರೆಗಳನ್ನು ಒಂದು ವಾರದಲ್ಲಿ ತುಂಬಿಸಬೇಕು, ಈಗಾಗಲೇ ಸುಮಾರು 8–10 ಬಾರಿ ಮನವಿ ಸಲ್ಲಿಸಿದರೂ ಇಲ್ಲಿಯವರೆಗೆ ಕೆರೆಗೆ ನೀರು ತುಂಬಿಸುತ್ತಿಲ್ಲ, ಈ ಕೆರೆಗಳು ಸಂಪೂರ್ಣ ಬರಿದಾಗಿವೆ ಇವುಗಳನ್ನು ತುಂಬಿಸಿದರೆ ಈ ಭಾಗದ 8–10 ಹಳ್ಳಿಗಳ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರು ಕೊಟ್ಟಂತಾಗುತ್ತದೆ. ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಅಪರ್ ಜಿಲ್ಲಾಧಿಕಾರಿಗಳಾದ ಡಾ. ಔದ್ರಾಮ ಅವರಿಗೆ ಮನವಿ ಸಲ್ಲಿಸಿದರು ಈ ವೇಳೆ ಮನವಿ ಸಲ್ಲಿಸಿ ಮಾತನಾಡಿದ ತಾಲೂಕಾ ಅಧ್ಯಕ್ಷರಾದ ಅನಮೇಶ ಜಮಖಂಡಿ, ಯುವ ಘಟಕದ ಅಧ್ಯಕ್ಷರಾದ ರಾಜೇಸಾ ನದಾಫ, ಅವರು ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದು ಆಗಿದೆ, ಕಳೆದ 3 ವರ್ಷಗಳ ಹಿಂದೆ ಕೆರೆಯಲ್ಲಿಯೆ ಕುಳಿತು ಹೋರಾಟ ಕೂಡಾ ಮಾಡಲಾಗಿದೆ, ಆದರು ಅಧಿಕಾರಿಗಳು ದಯೆ ತೋರುತ್ತಿಲ್ಲ, 3–4 ದಿನಗಳಲ್ಲಿ ಈ ಕೆರೆಗಳನ್ನು ತುಂಬಿಸದಿದ್ದರೆ ವಿಜಯಪುರ–ಕಲ್ಬುರ್ಗಿ ಹೆದ್ದಾರಿ ಬಂದ ಮಾಡಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮಾತನಾಡುತ್ತಾ, ಆಲಿಮಟ್ಟಿ ನಮ್ಮ ಜಿಲ್ಲೆಯ ರೈತರ ಫಲವತ್ತಾದ ಭೂಮಿಯನ್ನು ಕೊಟ್ಟು ಜಿಲ್ಲೆಗೆ ನೀರಾವರಿ ಆಗಲೇಂದು ನಮ್ಮ ಹಿರಿಯರು ಕೊಟ್ಟ ಉಡುಗೊರೆಯಾಗಿದೆ, ಆದರೆ ನಮ್ಮ ಜಿಲ್ಲೆಯಲ್ಲಿ ಕೆರೆಗಳು ಬತ್ತಿಹೋಗಿ ಕುಡಿಯಲು ನೀರು ಸಿಗದೇ ಪರದಾಡುವಂತಾಗಿದೆ ಆದರೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಬಾಗದ ರೈತರಿಗೆ ಮೋಸ ಮಾಡಿ ನೆರೆಯ ಆಂದ್ರ ತೆಲಂಗಾಣಕ್ಕೆ ನೀರು ಬಿಡುವುದು ಯಾವ ನ್ಯಾಯ ಕೂಡಲೇ ನೀರನ್ನು ಮುಂದಿನ ಮಳೆಗಾಲದವರೆಗೂ ಹಿಡಿದಿಟ್ಟು ಅತೀ ಅವಶ್ಯಕತೆಗೆ ಅನುಗುಣವಾಗಿ ಎಲ್ಲಾ ಕೆರೆಗಳನ್ನು ತುಂಬಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮನಗೌಡ ಪಾಟೀಲ, ಯುವ ಘಟಕದ ತಾಲೂಕಾ ಅಧ್ಯಕ್ಷರಾದ ಆತ್ಮಾನಂದ ಭೈರೋಡಗಿ, ಮುಖಂಡರಾದ ಬಸವರಾಜ ಮಸೂತಿ, ಕಲ್ಲಪ್ಪ ಇಂಡಿ, ಹಾಜಿಸಾಬ ಮುತ್ಯಾರು, ಬಸವರಾಜ ತೇಲಿ, ಇರಸಂಗಪ್ಪ ಬಿರಾದಾರ, ಚಂದ್ರಾಮ ಬಿಸನಾಳ, ಪರಶುರಾಮ ನಾಯ್ಕೋಡಿ, ಮಲ್ಲು ಮಾಲಗಾರ, ಬಸವರಾಜ ಬೈರೋಡಗಿ, ಪರಶುರಾಮ ನಾಯ್ಕೋಡಿ, ಹುರಪ್ಪ ತಳವಾರ, ಮುತ್ತಪ್ಪ ನಾಗರಳ್ಳಿ, ಪ್ರಕಾಶ ಇಂಡಿ, ಭಿರಪ್ಪ ನಾಗರಾಳ, ರಾಮಚಂದ್ರ ವಡ್ಡರ, ಅಶೋಕ ಚಟ್ಟರಕಿ, ಕಲ್ಲಪ್ಪ ಅವಜಿ, ಪ್ರಕಾಶ ಮಾಳಿ, ಬಸು ಇಂಡಿ, ನಜೀರ ನದಾಫ, ನಂದಪ್ಪ ನಾಗರಳ್ಳಿ, ಜಕ್ಕಪ್ಪಗೌಡ ಪಾಟೀಲ, ಸೇರಿದಂತೆ ಇತರರು ಇದ್ದರು.

# ಅಪೌಷ್ಟಿಕತೆ ಮುಕ್ತ ಸಮಾಜ ನಿರ್ಮಾಣಕ್ಕೆ ಜನಸಹಭಾಗಿತ್ವ ಅಗತ್ಯ: ರಾಯಪ್ಪ ಹುಣಸಗಿ

ಕಲಬುರಗಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಐಪಿಇ ಗ್ಲೋಬಲ್ ಸಂಸ್ಥೆಯ ಸಹಯೋಗದಲ್ಲಿ 9ನೇ ರಾಷ್ಟ್ರೀಯ ಪೋಷಣ್ ಮಾಸಾಚರಣೆಯ ಅಂಗವಾಗಿ "ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ" ಅಭಿಯಾನದಡಿ ಪೌಷ್ಟಿಕತೆ ಮತ್ತು ಆರೋಗ್ಯದ ಕುರಿತು ಜನಜಾಗೃತಿ ಮೂಡಿಸಲು ಬುಧವಾರ ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ 'ಪೋಷಣ್ ರನ್' ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರು ಚಾಲನೆ ನೀಡಿ ಮಾತನಾಡಿ, ಅವರು "ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿದಾಗ ಮಾತ್ರ ಅವುಗಳ ಉದ್ದೇಶ ಸಾರ್ಥಕವಾಗುತ್ತದೆ.ಆದ್ದರಿಂದ ಅರ್ಹರು ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳ ಪೌಷ್ಟಿಕತೆ, ತಾಯಿ–ಮಗುವಿನ ಆರೋಗ್ಯ ಹಾಗೂ ಅಂಗನವಾಡಿಗಳ ಅಭಿವೃದ್ಧಿ ಸರ್ಕಾರದ ಇಲಾಖೆಗಳಷೆ ಅಲ್ಲ, ಇಡೀ ಸಮಾಜದ ಹೊಣೆಗಾರಿಕೆಯಾಗಿದೆ" ಎಂದು ಹೇಳಿದರು.'ನಮ್ಮ ಅಂಗನವಾಡಿ–ನಮ್ಮ ಜವಾಬ್ದಾರಿ' ಎಂಬ ಆಶಯವು ಪ್ರತಿಯೊಬ್ಬರಲ್ಲೂ ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸಬೇಕು. ಅಂಗನವಾಡಿಗಳು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಭದ್ರ ಬುನಾದಿಯಾಗಿದ್ದು, ಅವುಗಳ ಅಭಿವೃದ್ಧಿ ಮತ್ತು ಸೇವೆಗಳ ಸದ್ಬಳಕೆಗೆ ಸಮುದಾಯದ ಸಕ್ರಿಯ ಸಹಕಾರ ಅಗತ್ಯ. ಪ್ರತಿಯೊಂದು ಮಗುವಿಗೂ ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ ಮತ್ತು ಸಮರ್ಪಕ ಆರೈಕೆ ದೊರೆತಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಿಸಲು ಸಾಧ್ಯ" ಎಂದು ತಿಳಿಸಿದರು.

ಪೋಷಣ್ ಅಭಿಯಾನದ ಉದ್ದೇಶವನ್ನು ವಿವರಿಸಿದ ಅವರು, "ಅಪೌಷ್ಟಿಕತೆ ಮುಕ್ತ ಸಮಾಜ ನಿರ್ಮಾಣವು ಕೇವಲ ಸರ್ಕಾರದ ಕಾರ್ಯಕ್ರಮಗಳಿಂದ ಸಾಧ್ಯವಿಲ್ಲ; ಅದಕ್ಕೆ ಜನರ ಸಹಭಾಗಿತ್ವವೂ ಮುಖ್ಯ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು, ಸಮತೋಲಿತ ಆಹಾರ ಸೇವನೆ, ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಕುರಿತು ಪ್ರತಿಯೊಂದು ಕುಟುಂಬದಲ್ಲೂ ಜಾಗೃತಿ ಮೂಡಿಸಬೇಕು. ಪೌಷ್ಟಿಕತೆಯ ಅರಿವು ಜನಾಂದೋಲನವಾಗಿ ರೂಪುಗೊಂಡಾಗ ಮಾತ್ರ ಆರೋಗ್ಯವಂತ ಪೀಳಿಗೆಯನ್ನು ನಿರ್ಮಿಸಲು ಸಾಧ್ಯ" ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ್ ಅವರು ಮಾತನಾಡಿ, "ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆ, ಅಪೌಷ್ಟಿಕತೆಯ ನಿವಾರಣೆ ಹಾಗೂ ಪೌಷ್ಟಿಕ ಆಹಾರದ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವುದು ಪೋಷಣ್ ಮಾಸಾಚರಣೆಯ ಪ್ರಮುಖ ಉದ್ದೇಶವಾಗಿದೆ. ತಾಯಿಯ ಆರೋಗ್ಯದಿಂದಲೇ ಮಗುವಿನ ಆರೋಗ್ಯಕರ ಬೆಳವಣಿಗೆಗೆ ಭದ್ರ ಬುನಾದಿ ನಿರ್ಮಾಣವಾಗುತ್ತದೆ.

# ಮಕ್ಕಳ ಪ್ರೌಢಾವಸ್ಥೆಯಲ್ಲಿ ಬೆಳವಣಿಗೆ




ವೀಣಾ ಹೇಮಂತಗೌಡ ಪಾಟೀಲ್
ಮುಂಡರಗಿ– ಗದಗ

■ ಉದಯರಶ್ಮಿ ದಿನಪತ್ರಿಕೆ

**ನಮ್ಮ ಮಕ್ಕಳ ಬದುಕಿನಲ್ಲಿ ಒಳ್ಳೆಯ ಹವ್ಯಾಸಗಳನ್ನು ರೂಡಿಸುವ ಮೂಲಕ ಮುಂದೆ ನಮ್ಮ ಮಕ್ಕಳು ನಮಗೆ ತಲೆ ನೋವಾಗುವ, ಹೊರೆಯಾಗುವ ತೊಂದರೆಗಳನ್ನು ತಪ್ಪಿಸಬಹುದು. ಉತ್ತಮ ಹವ್ಯಾಸಗಳು ಒಳ್ಳೆಯ ಬದುಕನ್ನು ರೂಪಿಸಿಕೊಳ್ಳಲು ಸಹಾಯಕ. ಅಂತಹ ಹವ್ಯಾಸಗಳನ್ನು ನಮ್ಮ ಮಕ್ಕಳ ಬದುಕಿನಲ್ಲಿ ಚಿಕ್ಕಂದಿನಿಂದಲೇ ರೂಢಿಸಬೇಕು.**

ಹವ್ಯಾಸಗಳು ನಮ್ಮ ಬದುಕನ್ನು ರೂಪಿಸುತ್ತವೆ. ಮಕ್ಕಳ ಬಾಲ್ಯಾವಸ್ಥೆ ಅವರ ಬದುಕಿಗೆ ಅತ್ಯವಶ್ಯಕವಾದ ಮೂಲಭೂತ ಬುನಾದಿಯನ್ನು ಹಾಕಿದರೆ ಪ್ರೌಢಾವಸ್ಥೆಯಲ್ಲಿ ಅವುಗಳನ್ನು ಪರಿಪಾಲಿಸುವುದು ಸರಳವಾಗುತ್ತದೆ.



ನಾವು ಚಿಕ್ಕಂದಿನಲ್ಲಿ ಮಕ್ಕಳಿಗೆ ನಿತ್ಯವಿಧಿಗಳನ್ನು ಸರಿಯಾದ ಕ್ರಮದಲ್ಲಿ ಅನುಸರಿಸಲು ಅಭ್ಯಾಸ ಮಾಡಿಸಬೇಕು ಎಂಬುದನ್ನು ಈ ಹಿಂದಿನ ಸಂಚಿಕೆಯಲ್ಲಿ ಅರಿತಿದ್ದೇವೆ. ಹಾಗೆ ಮಕ್ಕಳಲ್ಲಿ ನಿತ್ಯ ಕರ್ಮಗಳನ್ನು, ಒಳ್ಳೆಯ ಆಹಾರದ ಅಭ್ಯಾಸಗಳನ್ನು ಚಿಕ್ಕಂದಿನಲ್ಲಿಯೇ ಅವರ ಜೀವನದ ಭಾಗವಾಗಿ ರೂಢಿಸಬೇಕು. ಆಹಾರದ ರುಚಿ, ಸತ್ವ, ಹಣ್ಣು ತರಕಾರಿಗಳ ಸೇವನೆಯಿಂದಾಗುವ ಪ್ರಯೋಜನಗಳುನಾರಿನಪದಾರ್ಥಗಳ,ದ್ವಿದಳ ಧಾನ್ಯಗಳ ಕುರಿತ ಜ್ಞಾನ ವನ್ನು ಪಾಲಕರಾದವರು ಪ್ರತಿದಿನ ಮಾಹಿತಿಯ ರೂಪದಲ್ಲಿ ಮಕ್ಕಳೊಂದಿಗೆ ಹಂಚಿಕೊಳ್ಳಬೇಕು.

ಮಕ್ಕಳು ಆಟ ಪಾಠಗಳಲ್ಲಿ ಭಾಗಿಯಾಗಬೇಕು. ಆಟಗಳು ಮಕ್ಕಳಲ್ಲಿ ಸ್ಪರ್ಧಾ ಮನೋಭಾವ ಹೊಂದಾಣಿಕೆ, ಅಭಿಮಾನ ಮತ್ತು ಆತ್ಮಸ್ಥೈರ್ಯಗಳನ್ನು ಬೆಳೆಸುತ್ತವೆ. ಮಕ್ಕಳು ಸರಿಯಾದ ಸಮಯಕ್ಕೆ ನಿದ್ರೆ ಮಾಡಲು ಕೂಡ ರೂಢಿಸಬೇಕು. ನಿಯಮಿತವಾದ ಆಹಾರ ಸೇವನೆ, ಒಳ್ಳೆಯ ನಿದ್ರೆ, ಆಟೋಟಗಳು ಮತ್ತು ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಂಡರೆ ಒಳ್ಳೆಯ ಜೀವನವನ್ನು ಸಾಗಿಸಲು ಸಹಕಾರಿಯಾಗುತ್ತದೆ.

ಏಷ್ಯಾ ಖಂಡದ ವಾಸಿಗಳಾದ ನಾವುಗಳು ವಾಸಿಸುತ್ತಿರುವ ಪರಿಸರಕ್ಕೆ ಅನುಗುಣವಾಗಿ ನಮ್ಮ ಜೀವನ ಮತ್ತು ಆಹಾರ ಕ್ರಮವನ್ನು ರೂಪಿಸಿಕೊಳ್ಳಬೇಕು. ನಮ್ಮ ದೇಶದಲ್ಲಿ ಉತ್ತರ ಭಾಗದಲ್ಲಿ ಹಿಮ ಸುರಿಯುತ್ತಿದ್ದರೆ ದಕ್ಷಿಣ ಭಾಗದಲ್ಲಿ ರಣ ರಣ ಬಿಸಿಲು. ಇಲ್ಲಿ ಅಗ್ನಿಯ ಪ್ರಭಾವ ತುಸು ಹೆಚ್ಚೇ ಇರುತ್ತದೆ. ಖಾರದ ಮತ್ತು ತೀಕ್ಷ್ಣವಾದ ಹುಳಿ ಪದಾರ್ಥಗಳು ನಮ್ಮಲ್ಲಿ ಅಜೀರ್ಣವನ್ನು ಉಂಟು ಮಾಡಬಹುದು. ಮಧ್ಯಾಹ್ನದ ಸಮಯದಲ್ಲಿ ದೇಹದ ಉಷ್ಣತೆಯನ್ನು ತಗ್ಗಿಸಲು ನಾವು ಮೊಸರು ಮಜ್ಜಿಗೆಯನ್ನು ಊಟದಲ್ಲಿ ಬಳಸುತ್ತೇವೆ. ಎಷ್ಟೋ ಬಾರಿ ರಾತ್ರಿಯ ಸಮಯದಲ್ಲಿಯೂ ಕೂಡ ಇವುಗಳ ಅವಶ್ಯಕತೆ ನಮಗಿದೆ.

ಇನ್ನು ಪ್ರತಿದಿನ ಸಂಜೆ ಶಾಲೆಯಿಂದ ಬಂದ ಕೂಡಲೇ ಕೈ ಕಾಲು ಮುಖ ತೊಳೆದು ತಾಯಿ ಕೊಟ್ಟ ತಿಂಡಿ ತಿಂದು ಹಾಲು ಕುಡಿದು ಆಟವಾಡಿದ ಮಕ್ಕಳು ಮತ್ತೆ ಮನೆಗೆ ಬಂದು ಶಾಲೆಯಲ್ಲಿ ಕೊಟ್ಟ ಮನೆ ಪಾಠವನ್ನು ಬರೆದು ಓದಿ ಮುಗಿಸಬೇಕು. ಇದು ಮಕ್ಕಳ ಕೆಲಸವಾದರೆ ಪಾಲಕರು ಮಕ್ಕಳಿಗೆ ರಾತ್ರಿ 8:00 ಗಂಟೆಗೆ ರಾತ್ರಿಯ ಊಟವನ್ನು ಮಾಡಿಸಲೇಬೇಕು. ರಾತ್ರಿಯ ಊಟವನ್ನು ಎಂಟು ಗಂಟೆಗೆ ಮುಂಚೆ ಮಾಡಿಸುವುದರಲ್ಲಿ ಬಹಳಷ್ಟು ಅನುಕೂಲಗಳು ಇವೆ. 8 ಗಂಟೆಗೆ ಆಹಾರವನ್ನು ಸೇವಿಸುವ ಮಕ್ಕಳ ಪಚನ ಕ್ರಿಯೆ ಸರಿಯಾಗಿ ಆಗಿ ಮುಂಜಾನೆ ಅಲರಾಂ ಕೂಗುವ ಮುನ್ನವೇ, ಪಾಲಕರು ಎಬ್ಬಿಸುವ ಮುನ್ನವೇ

ಮಕ್ಕಳು ಎದ್ದು ತಮ್ಮ ದೈನಂದಿನ ಕ್ರಿಯೆಗಳಲ್ಲಿ




ತೊಡಗಲು ಅನುಕೂಲವಾಗುತ್ತದೆ. ಹಾಗೆ ಬೇಗನೆ ಏಳುವ ಮಕ್ಕಳು ಮುಂಜಾನೆ ಓಡುವ, ನಡೆಯುವ, ವ್ಯಾಯಾಮ ಮಾಡುವ ಕ್ರಿಯೆಗಳಲ್ಲಿ ತೊಡಗುತ್ತಾರೆ ಇಲ್ಲವೇ ತಮ್ಮ ಶಾಲೆಯ ಪಠ್ಯ ಚಟುವಟಿಕೆಗಳಲ್ಲಿ, ಓದು ಬರಹಗಳಲ್ಲಿ ತೊಡಗಿಕೊಳ್ಳುತ್ತಾರೆ. ಇನ್ನು ರಾತ್ರಿ ಬೇಗನೆ ಊಟ ಮಾಡುವುದರಿಂದ ಮಕ್ಕಳು ಬೆಳಗಿನ ಜಾವ ಬೇಗನೆ ಎದ್ದು ಮನೋದೈಹಿಕ ಶ್ರಮದ ಕೆಲಸಗಳಲ್ಲಿ ತೊಡಗಿಕೊಳ್ಳುವ ಕಾರಣ ಪಾಲಕರು ಅವರ ಹಿಂದೆ ತಿಂಡಿಯ ತಟ್ಟೆಯನ್ನು ಹಿಡಿದುಕೊಂಡು ಓಡಾಡುವ ಮುನ್ನವೇ ಮಕ್ಕಳು ಹಸಿದು ಮುಂಜಾನೆಯ ತಿಂಡಿಯನ್ನು ಸೇವಿಸುತ್ತಾರೆ. ಈ ರೀತಿ ಬೇಗನೇ ತಿಂಡಿಯನ್ನು ಸೇವಿಸುವ ಮಕ್ಕಳ ಮೆದುಳು ಚುರುಕಾಗಿದ್ದು ಶಾಲೆಯ ತರಗತಿಯಲ್ಲಿ ಕುಳಿತುಕೊಳ್ಳುವ ಮಕ್ಕಳು ಪಠ್ಯಗಳನ್ನು ಗಮನವಿಟ್ಟು ಕೇಳುತ್ತಾರೆ. ಇದು ಅವರಲ್ಲಿನ ಜಾಣತನ ಹೆಚ್ಚಾಗುವ ಮೂಲಕ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗುತ್ತದೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳು ಬಾಲ್ಯಾವಸ್ಥೆಯಲ್ಲಿ ರೂಢಿಸಿಕೊಂಡ ಮೌಲ್ಯವರ್ಧಿತ ಚಟುವಟಿಕೆಗಳು ಅವರ ಬದುಕನ್ನು ಬೆಳಗುತ್ತವೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಸ್ವಾವಲಂಬಿತನವನ್ನು ರೂಢಿಸಬೇಕು. ತಮ್ಮ ಶಾಲಾ ಪಠ್ಯಪುಸ್ತಕಗಳನ್ನು ಬ್ಯಾಗನ್ನು ಎತ್ತಿ ಇಡಲು, ತಮ್ಮ ತಟ್ಟೆ ಲೋಟಗಳನ್ನು ತಾವೇ ಸಿಂಕಿನಲ್ಲಿ ಹಾಕಿ ಬರುವುದನ್ನು, ತಮ್ಮ ಶಿವುಗಳನ್ನು ಸಾಕ್ಸ್ ಗಳನ್ನ ಒಂದೆಡೆ ಇಡುವುದನ್ನು ತಮ್ಮ ಚಿಕ್ಕ ಪುಟ್ಟ ಕೆಲಸಗಳನ್ನು ತಾವೇ ನಿರ್ವಹಿಸಿಕೊಳ್ಳುವುದನ್ನು ಕಲಿಯಬೇಕು. ಹೀಗೆ ಮಕ್ಕಳನ್ನು ಸ್ವಾವಲಂಬಿಯನ್ನಾಗಿಸುವ ಮೂಲಕ ಅವರ ಮುಂದಿನ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಬಹುದು.

ಇನ್ನು ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಅವರವರ ಕೆಲಸ ಕಾರ್ಯಗಳ ಜವಾಬ್ದಾರಿಯನ್ನು ನಿಧಾನವಾಗಿ ಅವರಿಗೆ ಹೊರಿಸುತ್ತಾ ಹೋದರೆ ಮುಂದೆ ಮಕ್ಕಳು ದೊಡ್ಡವರಾದ ಮೇಲೆ ಅವರು ತಮ್ಮ ಸಂಪೂರ್ಣ ಕೆಲಸ ಕಾರ್ಯಗಳನ್ನು ತಾವೇ ನಿರ್ವಹಿಸಿಕೊಳ್ಳುತ್ತಾರೆ. ಇದು ಪಾಲಕರು ತಮಗೆ ವಯಸ್ಸಾದ ಕಾಲದಲ್ಲಿ ಯಾವುದೇ ರೀತಿಯ ಒತ್ತಡಗಳಿಲ್ಲದೆ ಬದುಕಲು ಸಹಾಯಕವಾಗುತ್ತದೆ. ಚಿಕ್ಕಂದಿನಿಂದಲೇ ತಮ್ಮ ಪೆನ್, ಪೆನ್ಸಿಲ್ ಮತ್ತಿತರ ಸಲಕರಣೆಗಳನ್ನು ಎತ್ತಿಟ್ಟುಕೊಳ್ಳುವ ಮಕ್ಕಳು ಮುಂದೆ ದೊಡ್ಡವರಾದ ಮೇಲೆ ತಮ್ಮ ಎಲ್ಲ ಸರ್ಟಿಫಿಕೇಟ್ಗಳನ್ನು ಆಧಾರ್ ಕಾರ್ಡ್ ಬ್ಯಾಂಕ್ ಪಾಸ್ ಬುಕ್,ಪಾಸ್ಪೋರ್ಟ್ ಸೈಜ್ ಫೋಟೋಗಳು ಹೀಗೆ ಹತ್ತು ಹಲವು ದಾಖಲು ಪತ್ರಗಳನ್ನು ಸರಿಯಾಗಿ ಎತ್ತಿಟ್ಟುಕೊಳ್ಳಲು ಕಲಿಯುತ್ತಾರೆ.

ನಮ್ಮ ಮೂಲಭೂತ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ವಿಧಾನಗಳನ್ನು ಮಕ್ಕಳಿಗೆ ಕಲಿಸಬೇಕು. ಅವಶ್ಯಕತೆ ಇಲ್ಲವೇ ಇದ್ದಾಗ ವಿದ್ಯುತ್ ಉಪಕರಣಗಳನ್ನು ಬಂದ್ ಮಾಡುವದನ್ನುಕಲಿಸಿಕೊಡಬೇಕು. ಎಷ್ಟೋ ಬಾರಿ ಮನೆಯಲ್ಲಿ ಬೆಳಕಿರುವಾಗಲೂ ಲೈಟುಗಳನ್ನು, ಫ್ಯಾನುಗಳನ್ನು ಅನವಶ್ಯಕವಾಗಿ ಹಾಕಿ ಹಾಗೆಯೇ ಬಿಟ್ಟಿರುತ್ತಾರೆ. ಇಂತಹ ಸಮಯದಲ್ಲಿ ಮಕ್ಕಳು ಅನವಶ್ಯಕವಾಗಿ ಉರಿಸುವ ಲೈಟು ಫ್ಯಾನುಗಳನ್ನುಬಂದ್ ಮಾಡಿನಮ್ಮ ಸಂಪನ್ಮೂಲಗಳನ್ನು ಉಳಿಸಬೇಕು ಎಂಬ ತಿಳುವಳಿಕೆಯನ್ನು ಮಕ್ಕಳಿಗೆ ಕೊಡಬೇಕು.

ಹೀಗೆ ನಮ್ಮ ಮಕ್ಕಳ ಬದುಕಿನಲ್ಲಿ ಒಳ್ಳೆಯ ಹವ್ಯಾಸಗಳನ್ನು ರೂಡಿಸುವ ಮೂಲಕ ಮುಂದೆ ನಮ್ಮ ಮಕ್ಕಳು ನಮಗೆ ತಲೆ ನೋವಾಗುವ, ಹೊರೆಯಾಗುವ ತೊಂದರೆಗಳನ್ನು ತಪ್ಪಿಸಬಹುದು. ಉತ್ತಮ ಹವ್ಯಾಸಗಳು ಒಳ್ಳೆಯ ಬದುಕನ್ನು ರೂಪಿಸಿಕೊಳ್ಳಲು ಸಹಾಯಕ... ಅಂತಹ ಹವ್ಯಾಸಗಳನ್ನು ನಮ್ಮ ಮಕ್ಕಳ ಬದುಕಿನಲ್ಲಿ ಚಿಕ್ಕಂದಿನಿಂದಲೇ ರೂಢಿಸಬೇಕು. ಇಂದಿನ ಮಕ್ಕಳು ಮುಂದಿನ ಭವ್ಯ ಭವಿಷ್ಯದ ನಾಗರಿಕರು ಎಂಬುದನ್ನು ಅರಿತು ಅವರನ್ನು ಬೆಳೆಸಬೇಕು.






# ರಾಷ್ಟ್ರೀಯ ಹೆದ್ದಾರಿ ತಡೆ – ಪಟ್ಟು ಬಿಡದ ರೈತ ಸಮೂಹ



■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಪ್ರತಿ ಟನ್ ಕಬ್ಬಿಗೆ 5,500 ರೂ. ಬೆಂಬಲ ಬೆಲೆ ಸೇರಿದಂತೆ ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಬುಧವಾರವೂ ತಾಲೂಕಿನ ಯಲಗೂರ ಕ್ರಾಸ್ ಬಳಿ ಎನ್‌ಎಚ್–50 ರಲ್ಲಿ ಪ್ರತಿಭಟನೆ ಮುಂದುವರೆಯಿತು.

ಬುಧವಾರ ಬೆಳಗ್ಗೆಯಿಂದ ಹೆದ್ದಾರಿಯ ಒಂದು ಬದಿಯಲ್ಲಿ ನೂರಾರು ರೈತರು ಜಮಾಯಿಸಿದ್ದರು. ಸಂಜೆ 4ರ ನಂತರ ರಸ್ತೆಯ ಮಧ್ಯದಲ್ಲೇ ಕುಳಿತು ಧರಣಿ ನಡೆಸಿದರು. ಕೆಲ ರೈತರು ರಸ್ತೆಯಲ್ಲೇ ಮಲಗಿ ವಾಹನ ಸಂಚಾರ ತಡೆದರು.

ಹೆದ್ದಾರಿ ತಡೆಯಿಂದ ಹೊಸಪೇಟೆ ಕಡೆಗೆ ಹೋಗುವ ವಾಹನಗಳನ್ನು ಆಲಮಟ್ಟಿ ಮಾರ್ಗವಾಗಿ ಸಂಚರಿಸಲು ಅವಕಾಶ ನೀಡಲಾಯಿತು.

ನಂತರ ಡಿಸಿ ಮತ್ತು ಎಸ್‌ಪಿ ಜತೆ ಚರ್ಚೆ ನಡೆಸಿದ ರೈತ ಮುಖಂಡರು, ರಾಷ್ಟ್ರೀಯ ಹೆದ್ದಾರಿ ಆಲಮಟ್ಟಿ ಜಲಾಶಯದ ಸಮೀಪ ಇರುವ ಕಾರಣ ಹಾಗೂ ರಾಜ್ಯ ನಾಯಕರ ಸೂಚನೆಯ ಮೇರೆಗೆ ಹೋರಾಟದ ಸ್ವರೂಪ ಬದಲಿಸಲಾಗಿದೆ ಎಂದು ತಿಳಿಸಿದರು. ನಾಳೆ ಗುರುವಾರದಿಂದ ಬಬಲೇಶ್ವರದ ಬಾಗೇವಾಡಿಯಿಂದ ಧಾರವಾಡದವರೆಗೆ ಹಮ್ಮಿಕೆ ೂಂಡಿರುವಪಾದಯಾತ್ರೆಯಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿ ಹೆದ್ದಾರಿ ತಡೆ ತೆರವುಗೊಳಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ನಡಹಳ್ಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಕುಬಕಡ್ಡಿ, ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಸಾಬಣ್ಣ ಅಂಗಡಿ, ಸೀತಪ್ಪ ಗಣಿ, ಲಕ್ಷ್ಮೀ ಬಿರಾದಾರ, ಸಂಗೀತಾ ರಾಠೋಡ, ಆನಂದ ಹಡಗಲಿ, ರವಿ ಕೋತಿನ, ವಿಠ್ಠಲ ಮಸೂತಿ, ಸತೀಶ ನರಸರೆಡ್ಡಿ ಸೇ–ರಿದಂತೆ ಇತರರು ಇದ್ದರು.



# ಸಿ.ಟಿ.ರವಿ ಗೆ ಬಿಜೆಪಿ ಪದಾಧಿಕಾರಿಗಳಿಂದ ಸ್ವಾಗತ

ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣಕ್ಕೆ ಆಗಮಿಸಿದ ಮಾಜಿಸಚಿವ ಸಿ.ಟಿ.ರವಿ ಅವರನ್ನು ಬಿಜೆಪಿ ಮಂಡಲದ ಪದಾಧಿಕಾರಿಗಳು, ಕಾರ್ಯಕರ್ತರು ಸ್ವಾಗತಿಸಿ, ಸನ್ಮಾನಿಸಿದರು.

ಕಲಬುರ್ಗಿಯಿಂದ ಪಟ್ಟಣದ ಮೂಲಕ ಜಮಖಂಡಿಗೆ ತೆರಳುವ ಸಂದರ್ಭದಲ್ಲಿ ಮಾಜಿಸಚಿವ ಸಿ.ಟಿ.ರವಿ ಅವರನ್ನು ಸ್ವಾಗತಿಸಿ ನಂತರ ಶಾಂತೇಶ್ವರ ತೈಲ ವಿತರಣಾ ಕೇಂದ್ರದ ಆವರಣದಲ್ಲಿ ಸನ್ಮಾನಿಸುವುದರ ಮೂಲಕ ಕಾರ್ಯಕರ್ತರು ತಮ್ಮ ಅಭಿಮಾನ ತೋರಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿಸದಸ್ಯ ಶ್ರೀಶೈಲ ಕಬ್ಬಿನ, ಜಂಗಮ ಸಮುದಾಯದ ತಾಲ್ಲೂಕು ಘಟಕದ ಅಧ್ಯಕ್ಷ ಸೋಮಶೇಖರ ಹಿರೇಮಠ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ದೊಡಮನಿ, ಮಹಾಂತೇಶ ಬಿರಾದಾರ, ವಿಠ್ಠಲ ಯಕಂಚಿ, ಸಿದ್ರಾಮಯ್ಯ ಮಠ, ಕಲ್ಮೇಶ ಬುದ್ನಿ, ಜಕ್ಕು ದೊಡ್ಡಿನಿ, ಹಣಮಂತ್ರಾಯ ಮಣೂರ, ಪ್ರಕಾಶ ಡೋಣೂರಮಠ, ಜಗದೀಶ ಚವ್ಹಾಣ, ಶಿವರಾಜ ತಳವಾರ, ವಿಶಾಲ್ ಭಾಸುತ್ಕರ್, ಮಾಂತೇಶ ಹಾದಿಮನಿ, ಮಾಂತೇಶ ಪಾಟೀಲ, ಅಭಿಷೇಕ ಅಂಬಲಗಿ, ಧರ್ಮಣ್ಣ ನಡುಗೇರಿ ಇದ್ದರು.

# ಅಲ್ಪಸಂಖ್ಯಾತರ ಸರಳ ವಿವಾಹ ಸಹಾಯಧನಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2025–26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕ ಸಂಖ್ಯೆ: 222 ರಲ್ಲಿ ಘೋಷಿಸಿರುವಂತೆ ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರ ಸಮುದಾಯದವರ ಸರಳ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50 ಸಾವಿರ ರೂ.ಗಳ ಪ್ರೋತ್ಸಾಹ ಧನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ಸಾಮೂಹಿಕ ವಿವಾಹಗಳ ಪ್ರೋತ್ಸಾಹ ನೀಡಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುವ ಸಮೂಹ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ ರೂ. 50 ಸಾವಿರ ನೀಡುವ ಹಾಗೂ ಆಯೋಜಕರಿಗೆ ಪ್ರತಿ ಜೋಡಿಗೆ ಹೆಚ್ಚುವರಿಯಾಗಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ಆಯೋಜಕರುಗಳಿಗೆ ಪ್ರೋತ್ಸಾಹವಾಗಿ ಪ್ರತಿ ಜೋಡಿಗೆ 5000 ರೂ.ಗಳನ್ನು ನೀಡಲಾಗುವುದು.

ಅರ್ಜಿ ಹಾಗೂ ಇತರ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರಗಳಾದ ವಿಜಯಪುರ ಮೊ:8123710766,

ಮುದ್ದೇಬಿಹಾಳ ಮೊ:8722445552, ಬಸವನ ಬಾಗೇವಾಡಿ ಮೊ: 99723407321,ಇಂಡಿ ಮೊ: 9900109759 ಹಾಗೂ ಸಿಂದಗಿ ಮೊ: 9035558609 ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ :ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಸಾಧಕರಿಗೆ ನವೆಂಬರ್ 1ರಂದು ಸನ್ಮಾನ ಮಾಡಲು ಉದ್ದೇಶಿಸಲಾಗಿದೆ.

ಕಲೆ, ಸಾಹಿತ್ಯ, ಶಾಸ್ತ್ರೀಯ ಸಂಗಿತ,, ಸುಗಮ ಸಂಗೀತ, ಜನಪದ, ರಂಗಭೂಮಿ ಶಿಲ್ಪಕಲೆ, ನೃತ್ಯ, ಚಿತ್ರಕಲೆ, ಸಮಾಜ ಸೇವೆ, ಕೃಷಿ, ವೈದ್ಯಕೀಯ, ಪತ್ರಿಕೋದ್ಯಮ, ಸಂಕೀರ್ಣ ಇತರೆ ಕ್ಷೇತ್ರಗಳಲ್ಲಿ ತಮ್ಮ ಸಾಧನೆಯ ವಿವರಗಳನ್ನು ಒಳಗೊಂಡಂತೆ ತಮ್ಮ ಸ್ವ–ಪರಿಚಯ ಮತ್ತು ದಾಖಲೆಗಳೊಂದಿಗೆ ದಿನಾಂಕ: 27–10–2026 ರೊಳಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ, ಸ್ಟೇಶನ್ ರಸ್ತೆ ವಿಜಯಪುರ ಕಚೇರಿಗೆ ಸಲ್ಲಿಸಬಹುದಾಗಿದೆ.

ಈ ಕುರಿಂತೆ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ 08352–251261 ಸಂಖ್ಯೆಗೆ ಸಂಪರ್ಕಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶುಚಿತ್ವ, ಆರೋಗ್ಯಕ್ಕಾಗಿ ಕೈ ಸ್ವಚ್ಛತೆ ಅಗತ್ಯ

ಕಲಬುರಗಿ: ಮಾನವನಿಗೆ ಬರುವ ಬಹುತೇಕ ಸಾಮಾನ್ಯ ಖಾಯಿಲೆಗಳಿಗೆ ಪ್ರಮುಖ ಕಾರಣ ನೀರು ಮತ್ತು ಆಹಾರ. ಅನೇಕ ಕೆಲಸದಲ್ಲಿ ತೊಡಗಿ ಕೈಗಳನ್ನು ಸ್ವಚ್ಛಗೊಳಿಸದೆ ಆಹಾರ ಸೇವಿಸುವದರಿಂದ ಆಹಾರವು ವಿಷ ಹಾಗೂ ಕಲುಷಿತವಾಗಿ, ದೇಹದ ಮೇಲೆ ಪರಿಣಾಮ ಉಂಟಾಗುತ್ತದೆ.

ಶುಚಿತ್ವ ಮತ್ತು ಆರೋಗ್ಯಕ್ಕಾಗಿ ಆಗಾಗ್ಗೆ ಕೈಗಳನ್ನು ಸ್ವಚ್ಛಗೊಳಿಸುವುದು ತುಂಬಾ ಅಗತ್ಯವಾಗಿದೆ ಎಂದು ಖ್ಯಾತ ಕುಟುಂಬ ವೈದ್ಯ ಡಾ.ರಾಜಶೇಖರ ಪಾಟೀಲ್ ಹೇಳಿದರು.

ನಗರದ ಆಳಂದ ರಸ್ತೆಯ ಸಂತೋಷ ಕಾಲನಿ ಕ್ರಾಸ್ ಸಮೀಪವಿರುವ 'ಬಸವಗಂಗಾ ಕ್ಲಿನಿಕ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ವಿಶ್ವ ಕೈ ಶುಚಿತ್ವ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಉಪನ್ಯಾಸಕ ಎಚ್.ಬಿ.ಪಾಟೀಲ್ ಮಾತನಾಡಿ, ಎಲ್ಲರಿಗೂ ಕೈ ನೈರ್ಮಲ್ಯ ಅಗತ್ಯವಾಗಿದೆ. ಕೈಯಿಂದ ವೈರಾಣುಗಳು ನಮ್ಮ ದೇಹವನ್ನು ಪ್ರವೇಶಿಸಿ ಹಲವು ಸೊಂಕಿಗೆ ಕಾರಣವಾಗುತ್ತದೆ. ಕೈ–ಕಾಲು ತೊಳೆಯುವುದು ಪುರಾತನ ಕಾಲದಿಂದಲೂ ನಮ್ಮ ಪೂರ್ವಜರು ಅನುಸರಿಸಿಕೊಂಡು ಬರುತ್ತಿದ್ದಾರೆ. ದೇಹಕ್ಕೆ ಸಂಬಂಧಿಸಿದಂತೆ ಸಕಲ ಕಾರ್ಯವನ್ನು ಮಾಡುವ ಅಂಗ ಕೈಗಳಾಗಿವೆ. ಬಾಲ್ಯದಿಂದಲೇ ಆರೋಗ್ಯದ ಬಗ್ಗೆ ಜ್ಞಾನವನ್ನು ಬೆಳೆಸಬೇಕು. ಉಗುರುಗಳನ್ನು ಆಗಾಗ್ಗೆ ಕತ್ತರಿಬೇಕು. ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕೆಂದು ನುಡಿದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಶಿವಯೋಗೆಪ್ಪಾ ಎಸ್.ಬಿರಾದಾರ, ಅಸ್ಲಾಂ ಶೇಖ್, ದತ್ತು ಹಡಪದ, ಸುಭಾಷ ರಟಕಲ್ ಸೇರಿದಂತೆ ಇನ್ನಿತರರಿದ್ದರು.

## ಹೈದರಾಬಾದ್‌ನ ಉಸ್ಮಾನಿಯಾ ವಿವಿಯಲ್ಲಿ ವಿಶೇಷ ಉಪನ್ಯಾಸ, ಬಹುಭಾಷಾ ಕವಿಗೋಷ್ಠಿ

# ಮಾನವೀಯ ಮೌಲ್ಯ ಬಿತ್ತುವ ಕವಿತೆಗಳ ಅಗತ್ಯವಿದೆ :ಡಾ.ಖಾಡೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಶಾಂತಿ, ಸಹನೆ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳನ್ನು ಬಿತ್ತುವ ಮೂಲಕ ಹೊಸ ತಲೆಮಾರಿಗೆ ಉತ್ತಮ ಭವಿಷ್ಯದ ಭರವಸೆ ನೀಡುವ ಕವಿತೆಗಳ ಅಗತ್ಯ ಇಂದು ಹೆಚ್ಚಿದೆ ಎಂದು ಕವಿ, ಸಾಹಿತಿ ಡಾ. ಪ್ರಕಾಶ ಖಾಡೆ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಲಸಂಗಿ ಗೆಳೆಯರ ಪ್ರತಿಷ್ಠಾನ ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಹಾಗೂ ಬಹುಭಾಷಾ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕವಿತೆ ಜನರ ನಡುವೆ ಜೀವಂತವಾಗಿದ್ದು, ಜನಜೀವನದ ಭಾವನೆಗಳಿಗೆ ಅಭಿವ್ಯಕ್ತಿ ನೀಡುತ್ತಿದೆ ಎಂದರು.

ಕನ್ನಡದ ವಚನಕಾರರು ಸಮಾನತೆಯ ಸಂದೇಶ ಸಾರಿದರೆ, ತೆಲುಗು ಕವಿಗಳು ಶ್ರಮಜೀವಿಗಳ ಬದುಕಿಗೆ ಧ್ವನಿಯಾಗಿದ್ದಾರೆ. ದೇಶದ ವಿವಿಧ ಭಾಷೆಗಳ ಕವಿಗಳು ತಮ್ಮ ಸಾಹಿತ್ಯದ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯ ಮಾಡಿದ್ದಾರೆ ಎಂದು ಡಾ. ಖಾಡೆ ಬಣ್ಣಿಸಿದರು. ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಲಿಂಗಪ್ಪ ಗೋನಾಳ ಅವರು ಮಾತನಾಡಿ, ಹೊರನಾಡಿನಲ್ಲಿ ಇಂತಹ ಅರ್ಥಪೂರ್ಣ ಕನ್ನಡ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.

ಖ್ಯಾತ ಕವಿ ವಾಸುದೇವ ನಾಡಿಗ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ, ಕವಿತೆ ಸಮಾಜವನ್ನು ತಿದ್ದುವ, ಮನುಷ್ಯರನ್ನು ಬೆಸೆಯುವ ಹಾಗೂ ಬದುಕಿನಲ್ಲಿ ಹೊಸ ಆಶಾವಾದ ಮೂಡಿಸುವ ಶಕ್ತಿಯಾಗಿದೆ ಎಂದರು. ಭಾಷೆಗಳು ಬೇರೆ–ಬೇರೆಯಾಗಿದ್ದರೂ ಕಾವ್ಯದ ಮೂಲ ಆಶಯ ಮಾನವೀಯತೆಯನ್ನು ಬೆಸೆಯುವುದೇ ಆಗಿದೆ. ಕವಿತೆ ಜನರ ನಡುವೆ ಇಂದು ಜೀವಂತವಾಗಿದ್ದು, ಜನಜೀವನದ ಭಾವನೆಗಳಿಗೆ ಅಭಿವ್ಯಕ್ತಿ ನೀಡುತ್ತಿದೆ ಎಂದರು.

ಪ್ರೊ. ವಿ.ಬಿ. ತಾರಕೇಶ್ವರ ಅವರು ಜನಪದ ಸಾಹಿತ್ಯ ಕ್ಷೇತ್ರಕ್ಕೆ ಹಲಸಂಗಿ ಗೆಳೆಯರ ಬಳಗ ನೀಡಿದ ಅಪಾರ ಕೊಡುಗೆಯ ಕುರಿತು ಉಪನ್ಯಾಸ ನೀಡಿದರು. ಕಲಬುರಗಿಯ ಡಾ. ಶ್ರೀಶೈಲ ನಾಗರಾಳ ಅವರು ಹಲಸಂಗಿ ಗೆಳೆಯರ ಸಾಹಿತ್ಯಕ ಸಾಧನೆ ಹಾಗೂ ನವೋದಯ ಸಾಹಿತ್ಯ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿದರು.

ಬಹುಭಾಷಾ ಕವಿಗೋಷ್ಠಿ: ಬಳಿಕ ನಡೆದ ಬಹುಭಾಷಾ ಕವಿಗೋಷ್ಠಿಯಲ್ಲಿ ಕನ್ನಡ, ತೆಲುಗು ಹಾಗೂ ಇಂಗ್ಲಿಷ್ ಭಾಷೆಗಳ ಪ್ರಮುಖ ಕವಿಗಳು ಭಾಗವಹಿಸಿ ತಮ್ಮ ಕವನಗಳನ್ನು ವಾಚಿಸಿದರು.

ಕವಿಗಳಾದ ಸಿದ್ದರಾಮ ಬಿರಾದಾರ, ದೇವು ಮಾಕೊಂಡ, ರಾಜು ಕೊಪ್ಪ, ಸುಮತಿ ನಿರಂಜನ, ಪ್ರಹ್ಲಾದ ಜೋಶಿ, ಧನರಾಜ ಧರ್ಮಪುರ, ಗೋನವಾರ ಕಿಶನ್ ರಾವ್, ಕೊಂಡ ನಾಗೇಶ್ವರರಾವ್, ಬಿ. ಸುಹಾಸಿನಿ, ರಮೇಶ್ ಬಾಬು, ಸೂರ್ಯಪ್ರಕಾಶ, ಸತೀಶ ವಾಲಿ ಹಾಗೂ ವಿಜಯಲಕ್ಷ್ಮಿ ಬಿಸ್ವಾ ಸೇರಿದಂತೆ ಹಲವು ಸಾಹಿತಿಗಳು ಕವಿಗೋಷ್ಠಿಯಲ್ಲಿ ಕವನ ವಾಚಿಸಿದರು.

ಸುಹಾಸಿನಿ ಬಿ. ಪ್ರಾರ್ಥಿಸಿ ಸ್ವಾಗತಿಸಿದರು. ಹಲಸಂಗಿ ಗೆಳೆಯರ ಬಳಗ ಪ್ರತಿಷ್ಠಾನದ ಸದಸ್ಯ ಸಂಚಾಲಕರಾದ ಡಾ. ರಮೇಶ ಕತ್ತಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಇಲಾಖೆಯ ಪದಾಧಿಕಾರಿಗಳು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ದಂಡ :ಚನ್ನಾಳ

■ ಉದಯರಶ್ಮಿ ದಿನಪತ್ರಿಕೆ



ಬೆಳಗಾವಿ: ಆಡಳಿತದಲ್ಲಿ ಪಾರದರ್ಶಕತೆ, ಹಾಗೂ ಉತ್ತರದಾಯಿತ್ವವನ್ನು ಖಾತರಿಪಡಿಸುವಲ್ಲಿ ಮಾಹಿತಿ ಹಕ್ಕು ಕಾಯ್ದೆ ಮಹತ್ವದ ಪಾತ್ರ ವಹಿಸುತ್ತದೆ.

ಈ ಕಾಯ್ದೆಯಡಿ ಸಾರ್ವಜನಿಕರಿಗೆ ನಿಗದಿತ ಕಾಲಮಿತಿಯಲ್ಲಿ ಸೂಕ್ತ ಮಾಹಿತಿ ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ ಎಂದು ರಾಜ್ಯ ಮಾಹಿತಿ ಆಯುಕ್ತ ಪ್ರಕಾಶ ನಾರಾಯಣ ಚನ್ನಾಳ ಹೇಳಿದರು.

ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದಲ್ಲಿ ಇತ್ತೀಚಿಗೆ ಆಯೋಜಿಸಿದ್ದ ಮಾಹಿತಿ ಹಕ್ಕು ಕಾಯ್ದೆ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

2005ರ ಅಕ್ಟೋಬರ್ 12ರಂದು ಜಾರಿಗೆ ಬಂದ ಮಾಹಿತಿ ಹಕ್ಕು ಕಾಯ್ದೆಯು ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದರೊಂದಿಗೆ ಸರ್ಕಾರಿ ಅಧಿಕಾ–ರಿಗಳನ್ನು ಸಾರ್ವಜನಿಕರಿಗೆ ಉತ್ತರದಾಯಿಗಳನ್ನಾಗಿಸಿದೆ. ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಸುಲಭವಾಗಿ ದೊರೆಯುವಂತೆ ಮಾಡುವುದರ ಜತೆಗೆ ಸರ್ಕಾರಿ ಸೇವೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕಾಯ್ದೆ ಸಹಕಾ–ರಿಯಾಗಿದೆ.ಈನಿಟ್ಟಿನಲ್ಲಿ ಅಧಿಕಾರಿ,ಸಿಬ್ಬಂದಿ ಸಾರ್ವಜನಿಕ–ರಿಗೆ ಸಮರ್ಪಕವಾಗಿ ಮಾಹಿತಿ ಒದಗಿಸಬೇಕು ಎಂದು ಅವರು ತಿಳಿಸಿದರು. ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದಲ್ಲಿ ಅರ್ಜಿಗಳು ಹಾಗೂ ಮೇಲ್ಮನವಿಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಗಳನ್ನು ತ್ವ–ರಿತವಾಗಿ ಕೈಗೊಳ್ಳಲಾಗುತ್ತಿದೆ. ಆಯೋಗದ ಅಧಿಕಾ–ರಿಗಳು ತಂಡವಾಗಿ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಕಾಯ್ದೆಯ ಆಶಯದಂತೆ ಮಾಹಿತಿ ದೊರೆಯುವಂತೆ ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು.

ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ನಿಗದಿತ ಕಾಲಮಿತಿಯೊಳಗೆ ಸೂಕ್ತ ಹಾಗೂ ಸಮರ್ಪಕ ಮಾಹಿತಿ ಒದಗಿಸಬೇಕು. ಮಾಹಿತಿ ನೀಡುವಲ್ಲಿ ವಿಳಂಬ ಅಥವಾ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ದಂಡ ವಿಧಿಸುವುದರ ಜತೆಗೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಮಾಹಿತಿ ನೀಡಲು ವಿಫಲರಾದ ವಿವಿಧ ಇಲಾಖೆಗಳ ಅಧಿಕಾರಿಗಳ ವಿರುದ್ಧ ದಂಡ ಮತ್ತು ಶಿಸ್ತುಕ್ರಮ ಜರುಗಿಸಲಾಗಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರಿಗೆ ಮಾಹಿತಿ ಹಕ್ಕಿನ ಕುರಿತು ಅರಿವು ಮೂಡಿಸುವುದರೊಂದಿಗೆ ಸರ್ಕಾರಿ ಇಲಾಖೆಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಬಲಪಡಿಸುವುದು ಅಗತ್ಯವಾಗಿದೆ. ಅಧಿಕಾರಿಗಳು ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಬೇಕು ಎಂದು ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಗೋಲಗೇರಿಯಲ್ಲಿ ಕಬ್ಬು ಬೆಳೆಗಾರರಿಂದ ಹೆದ್ದಾರಿ ತಡೆದು ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಕಬ್ಬಿಗೆ ಪ್ರತಿ ಟನ್‌ಗೆ ರೂ.5,500 ಬೆಲೆ ನಿಗದಿಪಡಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ದಲಿತ ಸಂಘಟನೆಗಳು, ಕಬ್ಬು ಬೆಳೆಗಾರರ ಒಕ್ಕೂಟ ಮತ್ತು ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ಗುರುವಾರ ಸಾವಿರಾರು ರೈತರು ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಮದ ಅಂಬೇಡ್ಕರ್ ವೃತ್ತದ ಬಳಿ ಸಿಂದಗಿ–ಶಹಾಪುರ ರಾಜ್ಯ ಹೆದ್ದಾರಿ ತಡೆದು ಎರಡು ಗಂಟೆಗಳ ಕಾಲ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕಮ್ಯುನಿಸ್ಟ್ ಮುಖಂಡ ಎಚ್.ಬಿ. ಚಿಂಚೊಳ್ಳಿ, ರೈತ ಮುಖಂಡ ಸುಭಾಸಗೌಡ ಬಿರಾದಾರ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶಿವು ಹತ್ತಿ, ಬಸವರಾಜ ಮಾರಲಭಾವಿ, ನಿಂಗನಗೌಡ ಪಾಟೀಲ, ಶರಣಗೌಡ ಪಾಟೀಲ, ಶ್ರೀಶೈಲ ಜಾಲವಾದಿ, ಅಂಬ–ರೀಶ ಮಾರಲಭಾವಿ, ದೇವಿಂದ್ರ ಹದಲ್, ಎ.ಡಿ. ಕೋರವಾರ, ಶರಣಪ್ಪ ಕರ್ಜಾಳ, ಮಡು ನಾಯ್ಕೋಡಿ, ಆನಂದ ರಾಠೋಡ, ಕುಮಾರ ಗೊಂದಳಿ, ಬಾಬು ಜಾಲವಾದಿ, ನಾಗಣ್ಣ ಪಡೇಕನೂರ, ಶರಣು ಮನಗೂಳಿ, ಸೈಪುನ ಹಳಿಮನಿ ಹಾಗೂ ನಾಗೇಶ ರಾಠೋಡ ಸೇರಿದಂತೆ ಬ್ರಹ್ಮದೇವನಮಡು, ಡಂಬಳ, ಸಾಸಾಬಾಳ, ಢವಳಾರ, ಚಿಕ್ಕ ಅಲ್ಲಾಪೂರ, ಕರವಿನಾಳ ಮತ್ತು ಖಾನಾಪುರ ಗ್ರಾಮಗಳ ಕಬ್ಬು ಬೆಳೆಗಾರರು ಹಾಗೂ ರೈತರು ಪಾಲ್ಗೊಂಡಿದ್ದರು.

# ಮಠಗಳಿಂದ ಮಾನವೀಯತೆ–ಸದಾಚಾರದ ಸಂದೇಶ :ಭೂಸನೂರ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ಸಂಸ್ಕಾರಗಳನ್ನು ಉಳಿಸಿ ಬೆಳೆಸುವಲ್ಲಿ ಮಠಮಾನ್ಯಗಳ ಪಾತ್ರ ಮಹತ್ವದ್ದಾಗಿದೆ. ಪುರಾಣ, ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಆಧ–್ಯಾತ್ಮಿಕ ಅಭಿರುಚಿ ಮೂಡಿಸುವುದರ ಜೊತೆಗೆ ನೈತಿ–ಕ ಮೌಲ್ಯಗಳು, ಮಾನವೀಯತೆ ಮತ್ತು ಸದಾಚಾರದ ಸಂದೇಶವನ್ನು ಸಮಾಜಕ್ಕೆ ಸಾರುವ ಕಾರ್ಯವನ್ನು ಮಠಗಳು ನಿರಂತರವಾಗಿ ಮಾಡುತ್ತಿವೆ ಎಂದು ಮಾಜಿ ಶಾಸಕ ರಮೇಶ ಭೂಸನೂರ ಹೇಳಿದರು.

ಸಿಂದಗಿ ಮತಕ್ಷೇತ್ರದ ಕುಮಸಗಿಯ ಸದ್ಗುರು ವೆಂಕಟೇಶ್ವರ ಸಂಸ್ಥಾನ ಹಿರೇಮಠದಲ್ಲಿ ಶ್ರೀ ಸದ್ಗುರು ವೆಂಕಟೇಶ್ವರ ಮಹಾಸ್ವಾಮಿಗಳ 41ನೆಯ ಪುಣ್ಯಸ್ಮರಣೋತ್ಸವ, ನೂತನ ಕಿರು ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ಸಂಸ್ಕಾರಗಳನ್ನು ಉಳಿಸಿ ಬೆಳೆಸುವಲ್ಲಿ ಮಠಮಾನ್ಯಗಳ ಪಾತ್ರ ಮಹತ್ವದ್ದಾಗಿದೆ. ಪುರಾಣ, ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಆಧ–್ಯಾತ್ಮಿಕ ಅಭಿರುಚಿ ಮೂಡಿಸುವುದರ ಜೊತೆಗೆ ನೈತಿ–ಕ ಮೌಲ್ಯಗಳು, ಮಾನವೀಯತೆ ಮತ್ತು ಸದಾಚಾರದ ಸಂದೇಶವನ್ನು ಸಮಾಜಕ್ಕೆ ಸಾರುವ ಕಾರ್ಯವನ್ನು ಮಠಗಳು ನಿರಂತರವಾಗಿ ಮಾಡುತ್ತಿವೆ.

ಈ ವೇಳೆ ಶ್ರೀಮಠದ ಪೀಠಾಧಿಪತಿ ಅಭಿನವ ವೆಂಕಟೇಶ್ವರ ಮಹಾಸ್ವಾಮಿಗಳು ಮಾತನಾಡಿ, ಗ್ರಾಮದ ಧಾರ್ಮಿಕ ವಾತಾವರಣದಲ್ಲಿ ಶ್ರೀದೇವಿ ಪುರಾಣ ಹಾಗೂ ಶ್ರೀ ಸದ್ಗುರು ವೆಂಕಟೇಶ್ವರ ಚರಿತಾಮೃತ ಕಾರ್ಯಕ್ರಮಗಳು ಭಕ್ತಿಭಾವದಿಂದ ನಡೆಯಲಿದ್ದು, ಧಾರ್ಮಿಕ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಭಕ್ತರು ಉಪಸ್ಥಿತರಿರಲಿದ್ದಾರೆ. ಪ್ರತಿನಿತ್ಯ ಸದ್ಭಕ್ತರು ಪುರಾಣದಲ್ಲಿ ಭಾಗವಹಿಸಿ ಶರಣರ, ಸಂತರ ಮಹಾಂತರ ಜೀವನ ಚರಿತ್ರೆಗಳನ್ನು ಅರಿತುಕೊಳ್ಳಬೇಕು ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಈರಯ್ಯ ಮಠಪತಿ, ಪತ್ರಕರ್ತ ಗುರುಲಿಂಗಯ್ಯ ಹಿರೇಮಠ, ಶ್ರೀಮಂತ ನಾಗೂರ, ಸುರೇಶ, ಗಂಗನಳ್ಳಿ, ಕಡಣಿ ರಮೇಶ ಎಚ್. ಗಂಗನಳ್ಳಿ, ಕಲ್ಲು ಕಣಮೇಶ್ವರ, ರವೀಂದ್ರ ಕಲಶೆಟ್ಟಿ, ಉಪಾಧ್ಯಕ್ಷ ಬಸವರಾಜ ಪೂಜಾರಿ, ಪ್ರಕಾಶ ಗಂಗನಳ್ಳಿ, ವೆಂಕಟೇಶ ಬೇಳಗಿ ಸೇರಿದಂತೆ ಕುಮಸಗಿ, ದೇವಣಗಾಂವ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗಣ್ಯರು, ಜನಪ್ರತಿನಿಧಿಗಳು, ಧಾರ್ಮಿಕ ಮುಖಂಡರು ಹಾಗೂ ಸದ್ಭಕ್ತರು ಹಾಗೂ ಗ್ರಾಮಸ್ಥರು ಇದ್ದರು.

**ಕುಮಸಗಿ ಹಿರೇಮಠದಲ್ಲಿ ಜಾತ್ರಾ ಮಹೋತ್ಸವ । ಶ್ರೀ ಸದ್ಗುರು ವೆಂಕಟೇಶ್ವರ ಮಹಾಸ್ವಾಮಿಗಳ 41ನೆಯ ಪುಣ್ಯಸ್ಮರಣೋತ್ಸವ । ನೂತನ ಕಿರು ರಥೋತ್ಸವ ಜಾತ್ರೆ**

# ಅ.18ರಿಂದ ಬಿ.ಎಂ. ಪಾಟೀಲ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ




■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಇಲ್ಲಿನ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಕ್ರೀಡಾಂಗಣದಲ್ಲಿ ಶ್ರೀ ಬಿ. ಎಂ. ಪಾಟೀಲ ಮೆಮೋರಿಯಲ್ ಟ್ರೋಫಿ ವಿಜಯಪುರ ಪ್ರೀಮಿಯರ್ ಲೀಗ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿ ಇದೇ ದಿ. 18 ರಿಂದ ಏಳು ದಿನಗಳ ಕಾಲ ನಡೆಯಲಿದ್ದು, ಸಕಲ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಕ್ರೀಡಾ ಸಂಘಟಕರಾದ ಮಹಾಂತೇಶ ಮೇತ್ರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಣೆ ನೀಡಿದ ಅವರು, ಈ ಪಂದ್ಯಾವಳಿಯಲ್ಲಿ ಎಂಟು ತಂಟಗಳಾದ ಕರ್ನಾಟಕ ಕ್ರಿಕೆಟ್ ಕ್ಲಬ್, ಎಸ್. ಎಚ್. ಪಿ. ವಾರಿಯರ್ಸ್, ಶಾರದಾ ಸ್ಟ್ರೈಕರ್ಸ್, ವಿಜಯಪುರ ಡಿಸ್ಟಿಕ್ಟ್ ಪೊಲೀಸ್, ಬಿಜಾಪುರ ಟೈಗರ್ಸ್, ಸುಗ್ರೀವ ವಾರಿಯರ್ಸ್, ಟೀಮ್ ಪ್ರಜ್ವಲ, ಕವರಡ್ರೈವ್ ತಂಡಗಳು ಭಾಗವಹಿಸುತ್ತಿವೆ.

ಅ.18 ರಂದು ಈ ಪಂದ್ಯಾವಳಿಗೆ ವಿ.ಪ. ಸದಸ್ಯ ಸುನೀಲಗೌಡ ಪಾಟೀಲ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಮಾಜಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಕೆ.ಎಸ್.ಸಿ.ಎ ರಾಯಚೂರು ವಲಯ ಸಂಯೋಜಕ ಕುಶಾಲ ಪಾಟೀಲ ಗಡಗಿ, ಬಿ.ಎಲ್.ಡಿ.ಇ ಡೀಮ್ಡ್ ವಿವಿ ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ದೈಹಿಕ ಶಿಕ್ಷಣ ನಿರ್ದೇಶಕ ಎಸ್. ಎಸ್.ಕೋರಿ ಸೇರಿದಂತೆ ನಾನಾ ಗಣ್ಯರು ಆಗಮಿಸುವರು ಎಂದರು.

ಇದು ಕೇವಲ ಕ್ರಿಕೆಟ್ ಟೂರ್ನಮೆಂಟ್‌ಗೆ ಸೀಮಿತವಾಗಿಲ್ಲ, ವಿಜಯಪುರ ಜಿಲ್ಲೆಯ ಸ್ಥಳೀಯ ಕ್ರೀಡಾ ಪ್ರತಿಭೆಗಳಿಗೆ ಕ್ರೀಡಾ ಪಾಂಡಿತ್ಯವನ್ನು ಪ್ರದರ್ಶಿಸಲು, ವೃತ್ತಿಪರ ವಾತಾವರಣದಲ್ಲಿ ಆಡಲು ಅನುಕೂಲವಾಗಲು ಈ ಅವಾಶದ ವೇದಿಕೆ ಸೃಜಿಸಲಾಗಿದೆ, ಪ್ರತಿಯೊಂದು ತಂಡವು ತನ್ನದೇ ಆದ ಐಕಾನ್ ಆಟಗಾರ, ಸ್ಥಳೀಯ ಪ್ರತಿಭಾವಂತ ಆಟಗಾರರು ಮತ್ತು ಬಲಿಷ್ಠ ತಂಡವನ್ನು ಒಳಗೊಂಡಿದ್ದು, ಲೀಗ್ ಮಾದರಿಯಲ್ಲಿ ಟಿ–20 ಪಂದ್ಯಗಳು ನಡೆಯಲಿವೆ ಎಂದರು.

ಸಹ–ಆಯೋಜಕ ಪ್ರಶಾಂತ ಹಜೇರಿ, ಶ್ರೀಕಾಂತ ಛಾಯಾಗೋಳ, ಪೋರವಾಲ್ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# "ಹಸಿರು ಮುಡಿ ಲಲನೆಯರ ಜೀವದಡಿ" ನಲಿಕೆ ಸೊಗಸಲ್ಲಿ ನಾರಿ!



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಲ್ಲಿ ಆಧ್ಯಾತ್ಮದಡಿಯಲ್ಲಿ ಹಸಿರು ನಾರಿನಾಂಶ ದುಂಬಿತ್ತು. ದುಗಾ9ಮಾತೆಗೂ ಹೆಣ್ಣಿಗೂ ಶ್ರದ್ಧಾಭಕ್ತಾನು ರಸವೋತ್ಪತಿಯ ಅವಿನಾಭಾವ ಸಂಬಂಧದ ಜೀವಸತ್ವತೆ ಪವಿತ್ರತೆ ಹೊಂದಿತ್ತು.ನಾ–ರಿಮಣಿಗಳ ಭಕ್ತಿಭಾವದ ಗರಿ ಹಸಿರೋನ್ನತದಲ್ಲಿ ಮೇಳೈಸಿತ್ತು!

ಐತಿಹಾಸಿಕ ಗುಮ್ಮಟ ನಗರಿಯ ರಾಜಾಜಿ ನಗರ ಬಡಾವಣೆಯಲ್ಲಿನ ನಾಡದೇವಿ ಮಂದಿರದಲ್ಲಿ ಶುಕ್ರವಾರ ಬೆಳಗಿನ ಜಾವ ಇಂಥದೊಂದು ಧಾಮಿ9ಕ ಹಸಿರೋಲ್ಲಾಸದ ಭಕ್ತಿ ಕಲರವ ಮೂಡಿತ್ತು. ದೇವಿ ಅಂಗಳ ಭಕ್ತೆಯರ ಕಂಗಳಲ್ಲಿ ತುಂಬಿ ತುಳುಕಿತ್ತು. ದೈವಶಕ್ತಿಯ ಕೃಪಾ ಮಹಿಮೆ ಮನೋಜ್ಞವಾಗಿ ಪ್ರತಿಬಿಂಬಿಸುತ್ತಿತ್ತು. ಭಕ್ತೆಯರ ಉನ್ಮಾದದ ಭಕ್ತಿ ಪರಾಕಾಷ್ಠೆ ಸಂವೇದನಾಶೀಲತೆಯಿಂದ ಸಾಕ್ಷಾತ್ಕಾರಗೊಂಡಿತ್ತು!

ಹಸಿರು ಜೀವಾಳಗಳ ಭಕ್ತಿಭಾವದ ನಲಿದಾಟ ದೇವಿ ಮಂದಿರದಲ್ಲಿ ಮುಂಜಾವಿನ ವೇಳೆ ಅವ್ಯಾಹತವಾಗಿ ಸುತ್ತುವರೆದಿತ್ತು.ನವದುಗೆ9ಯ ಒಲುಮೆಯಿಂದ ನವರಾತ್ರಿಯ ಆರನೇ ದಿನ ಅಪಾರ ಮೊಗಭಾವಗಳು ಹಸಿರು ಸುಗಂಧ ಲೇಪಿತ ವರ್ಣ ಅಲಂಕಾರಳಿಂದ ಚಿಗುರೊಡೆದು ದೇವಿ ಕಾತ್ಯಾಯೆನಿ ರೂಪ ಸ್ಮರಿಸ ದೀಪಾರತಿ ಬೆಳಗಿದವು. ಹಸಿರೇ ಉಸಿರು ಬಣ್ಣಗಂಧದ ಲವಲವಿಕೆ ಇಂಚರದಿಂದ ಆರಾಧನಾ ಭಕ್ತಿ ತರ್ಪಣದ ಕಾಯಕದಲ್ಲಿ ನಿರತವಾಗಿದ್ದವು.

ಬಡಾವಣೆಯ ಸ್ನೇಹಿತೆಯರಾದ ತೇಜಸ್ವಿನಿ ಅವಟಿ, ರೇಖಾ ಕುಚನೂರ, ನಾಗರತ್ನಾ ಕುಲಕರ್ಣಿ, ರಾಜೇಶ್ವರಿ ಕನ್ನೂರ, ಸುನೀತಾ ಜಾಧವ, ಲಕ್ಷ್ಮೀ ಕಂತಿಮಠ, ದಾಕ್ಷಾಯಣಿ ಅವಟಿ, ಮೇಘಾ ಗಾಯಕವಾಡ, ವಿಶಾಲಾಕ್ಷಿ ಬಡಿಗೇರ ಮೊದಲಾದ ಒಡನಾಡಿ ಸ್ನೇಹಿತೆಯರು ಸಮೃದ್ಧಿ,ಶಾಂತಿ ಸಂಕೇತದ ಹಸಿರು ಬಣ್ಣದ ಸೀರೆಯನ್ನುಟ್ಟು ದೇವಿ ಅಂಗಳ ಪ್ರವೇಶಿಸಿ ಪೂಜಾ ಕೈಂಕರ್ಯ ನೆರವೇ–ರಿಸಿದರು.

# ಶ್ರೀ ಮಹಾಲಕ್ಷ್ಮೀ ದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ



ಕೆಂಭಾವಿ: ಪಟ್ಟಣದ ಸಂಜೀವನಗರ ಬಡಾವಣೆಯ ಶ್ರೀನಿಧಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಮಹಾಲಕ್ಷ್ಮೀ ದೇವಿ ಮಂದಿರದ ಲೋಕಾರ್ಪಣೆ ಹಾಗೂ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವದ ನಿಮಿತ್ತ ಶುಕ್ರವಾರ ಅತ್ಯಂತ ಭಕ್ತಿ ಶ್ರದ್ಧೆ ಮತ್ತು ಶಾಸ್ತ್ರೋಕ್ತ ವೈದಿಕ ವಿಧಿ ವಿಧಾನಗಳೊಂದಿಗೆ ಶ್ರೀ ಮಹಾಲಕ್ಷ್ಮಿ ದೇವಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯು ಸಂಭ್ರಮದಿಂದ ನೆರವೇರಿತು.

ನೂತನ ದೇವಸ್ಥಾನದಲ್ಲಿ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಬೆಳಿಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಚಾಲನೆ ಪಡೆದವು. ಗಣಪತಿ ಪೂಜೆ ಹಾಗೂ ಪುಣ್ಯಾಹವಾಚನದೊಂದಿಗೆ ಧಾರ್ಮಿಕ ವಿಧಿವಿಧಾನಗಳು ಆರಂಭಗೊಂಡವು. ನಂತರ ನವಗ್ರಹ ಹೋಮ, ವಾಸ್ತು ಹೋಮ, ಹಾಗೂ ಮಹಾಲಕ್ಷ್ಮೀ ಹೋಮಗಳನ್ನು ಸಂಕಲ್ಪ ಪೂರ್ವ ನೆರವೇ–ರಿಸಲಾಯಿತು.

ದೇವಿ ಮೂರ್ತಿಗೆ ಜಲಧಿವಾಸ, ಕ್ಷೀರಧಿವಾಸ, ಮತ್ತು ಧಾನ್ಯಧಿವಾಸ ಪೂಜೆಗಳನ್ನು ಪೂರೈಸಿ, ದೇವಿಗೆ ಪವಿತ್ರ ಜಲದಿಂದ ಮಜ್ಜನ ಸೇವೆಯನ್ನು ನಡೆಸಲಾಯಿತು.

ಮಧ್ಯಾಹ್ನ 12:30 ಗಂಟೆಗೆ ಸೌಮ್ಯ ಮುಹೂರ್ತದಲ್ಲಿ ವೇದಮಂತ್ರ ಘೋಷಗಳು ಹಾಗೂ ಮಂಗಳವಾದ್ಯಗಳೊಂದಿಗೆ ಶಾಸ್ತ್ರೋಕ್ತವಾಗಿ ಶ್ರೀ ಮಹಾಲಕ್ಷ್ಮಿ ದೇವಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಮಹಾಮಂಗಳಾರತಿ ನೆರವೇರಿತು.

ಧಾರ್ಮಿಕ ಮಹತ್ಕಾರ್ಯದಲ್ಲಿ ಮಾಗಣಗೇರಿಯ ಬ್ರಹನ್ಮಠದ ಡಾ.ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ ಹಾಗೂ ಅಮೃತ ಹಸ್ತದಿಂದ ದೇವಿ ಪ್ರಾಣ ಪ್ರತಿಷ್ಠಾಪನೆ ಜರುಗಿತು. ವೇದಮೂರ್ತಿಗಳಾದ ಏಳಗಿಯ ಶರಣಯ್ಯ ಶಾಸ್ತ್ರಿಗಳು, ರಾಯಚೂರಿನ ವೀರಭದ್ರಯ್ಯ ಶಾಸ್ತ್ರಿಗಳು, ಮಾಗಣಗೇರಿಯ ಚನ್ನಬಸಯ್ಯ ಶಾಸ್ತ್ರಿಗಳು ಹಾಗೂ ಹೊಸಕೇರಿಯ ಪ್ರಶಾಂತ ಶಾಸ್ತ್ರಿಗಳು ಅತ್ಯಂತ ನಿಷ್ಠೆಯಿಂದ ಹಾಗೂ ಶಾಸ್ತ್ರಬದ್ಧವಾಗಿ ಪೌರೋಹಿತ್ಯ ನೆರವೇರಿಸಿದರು.

ಭವ್ಯ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ನೂರಾರು ಭಕ್ತಾದಿಗಳು, ದಂಪತಿ ಸಮೇತರಾಗಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿ ತಾಯಿಯ ಕೃಪೆಗೆ ಪಾತ್ರರಾದರು.

ಪ್ರತಿಷ್ಠಾಪನಾ ಮಹೋತ್ಸವದ ನಂತರ ಆಗಮಿಸಿದ ಎಲ್ಲ ಭಕ್ತರಿಗೆ ತೀರ್ಥ ಪ್ರಸಾದ ಹಾಗೂ ಮಹಾಸಂತರ್ಪಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು.

# ಪ್ರಸಕ್ತ ಸಾಲಿಗೆ 7 ಲಕ್ಷ ಮೆ.ಟನ್ ಕಬ್ಬು ನುರಿಸುವ ಗುರಿ

## ಶ್ರೀದತ್ತ ಇಂಡಿಯಾ ಸಕ್ಕರೆ ಕಾರ್ಖಾನೆಯ ಐದನೇ ಹಂಗಾಮಿನ ಮೋಳಿ ಪೂಜೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಕರ್ನಾಟಕ– ಮಹಾರಾಷ್ಟ್ರ ಗಡಿಯ ಚಡಚಣ ತಾಲೂಕಿನ ಹಾವಿನಾಳದಲ್ಲಿರುವ ಶ್ರೀದತ್ತ ಇಂಡಿಯಾ ಪ್ರಾ.ಲಿಮಿಟೆಡ್ ಸಕ್ಕರೆ ಕಾರ್ಖಾನೆಯ 2026–27ನೇ ಸಾಲಿನ ಐದನೇ ಕಬ್ಬು ನುರಿಸುವ ಹಂಗಾಮಿನ ಮೋಳಿ ಪೂಜಾ ಕಾರ್ಯಕ್ರಮ ಅ.12ರಂದು ಶುಭ ಮುಹೂರ್ತದಲ್ಲಿ ನೆರವೇರಿತು.

ಶ್ರೀ ಕೃಷ್ಣ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾದ ಮಹಂತ್ ಶ್ರೀ ಪ.ಪೂ. ವಿದ್ವಾಂಸ ಶ್ಯಾಮಸುಂದರ ಶಾಸ್ತ್ರಿ ಮಹಾರಾಜರು ಹಾಗೂ ಕಾರ್ಖಾನೆಯ ಅಧ್ಯಕ್ಷೆ ಪ್ರೀತಿ ರೂಪಾರೇಲ್, ಪರಿಣಿತ ನಿರ್ದೇಶಕರಾದ ಜಿತೇಂದ್ರ ಧಾರು, ಕರಣ ರೂಪಾರೇಲ್, ಪರೀಕ್ಷಿತ ರೂಪಾರೇಲ್, ಚೇತನ ಧಾರು ಮತ್ತು ಶಿಖರ ಬ್ಯಾಂಕ್ ನಿರ್ದೇಶಕ ಅವಿನಾಶ ಮಾಗಾವಕರ ಅವರ ಶುಭಹಸ್ತದಿಂದ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಬ್ಬು ನುರಿಸುವ ಹಂಗಾಮಿನ ಸತ್ಯನಾರಾಯಣ ಪೂಜೆಯ ಗೌರವವನ್ನು ಕಬ್ಬು ಸರಬರಾಜು ವಿಭಾಗದ ಅಧಿಕಾರಿಗಳಾದ ರಜತ ಚವ್ಹಾಣ ಮತ್ತು ಪ್ರಮೋದ ಪಾಟೀಲ ಅವರಿಗೆ ನೀಡಲಾಯಿತು. ತೂಕದ ಸೇತುವೆ ಪೂಜೆಯ ಗೌರವವನ್ನು ಕೇನ್ ಯಾರ್ಡ್ ಮೇಲ್ವಿಚಾರಕ ಉಮಾಶಂಕರ ಕ್ಷತ್ರಿ ಅವರು ತಮ್ಮ ಪತ್ನಿಯೊಂದಿಗೆ ನೆರವೇ–ರಿಸಿದರು ಎಂದು ಕಾರ್ಖಾನೆಯ ಉಪಾಧ್ಯಕ್ಷ ಮೃತ್ಯುಂ–ಜಯ ಶಿಂಧೆ ತಿಳಿಸಿದರು.

**"7 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ"**

2026–27ನೇ ಸಾಲಿನ ಹಂಗಾಮಿನಲ್ಲಿ 7 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ಕಾರ್ಖಾನೆಯ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿರುವ ಎಲ್ಲ ಕಬ್ಬು ಬೆಳೆಗಾರರು ತಮ್ಮ ಕಬ್ಬನ್ನು ಕಾರ್ಖಾನೆಗೆ ಪೂರೈಸುವಂತೆ ಮೃತ್ಯುಂಜಯ ಶಿಂಧೆ ಮನವಿ ಮಾಡಿದರು.

ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಜಮೀನುಗಳಲ್ಲಿನಕಬ್ಬಿನಬೆಳೆಒಣಗುವಆತಂಕಎದುರಾಗಿದೆ. ಇಂತಹ ಸಂದರ್ಭದಲ್ಲಿ ಕಬ್ಬು ನುರಿಸುವ ಹಂಗಾಮನ್ನು ಶೀಘ್ರ ಆರಂಭಿಸುವುದು ರೈತರಿಗೆ ಅನುಕೂಲವಾಗಲಿದೆ. ಕಬ್ಬು ಕಟಾವು ಮತ್ತು ಸಾಗಣೆ ವಿಳಂಬವಾಗದಂತೆ ಅಗತ್ಯ ಯಂತ್ರೋಪಕರಣಗಳನ್ನು ಪೂರ್ಣ ಸಾಮರ್ಥ್ಯದೊಂದಿಗೆ ಗುತ್ತಿಗೆ ನೀಡಲಾಗಿದ್ದು, ಕಾರ್ಯಾಚರಣಾ ವ್ಯಾಪ್ತಿಯಲ್ಲಿ ಅವುಗಳನ್ನು ಸಿದ್ಧವಾಗಿಡಲಾಗಿದೆ ಎಂದು ಅವರು ವಿವ–ರಿಸಿದರು.

**"ಆರು ದಿನಗಳಲ್ಲಿ ಕಬ್ಬಿನ ಬಿಲ್ ಪಾವತಿ"**

ಕಳೆದ ನಾಲ್ಕು ವರ್ಷಗಳಿಂದ ರೈತರ ಹಿತದೃಷ್ಟಿಯಿಂದ ಕಾರ್ಖಾನೆಗೆ ಪೂರೈಸಿದ ಕಬ್ಬಿಗೆ ಉತ್ತಮ ಬೆಲೆ ನೀಡುತ್ತಾ ಬಂದಿದ್ದು, ಬಿಲ್‌ಗಳನ್ನು ಕೂಡ ಸಕಾಲದಲ್ಲಿ ಪಾವತಿಸಲಾಗಿದೆ. ಪ್ರಸಕ್ತ ಹಂಗಾಮಿನಲ್ಲಿಯೂ ರೈತ–ರಿಗೆ ಹೆಚ್ಚಿನ ಬೆಲೆ ನೀಡುವ ಉದ್ದೇಶವಿದೆ. ಕಾರ್ಖಾನೆಗೆ ಪೂರೈಸುವ ಕಬ್ಬಿನ ಹಣವನ್ನು ಸಂಬಂಧಿಸಿದ ರೈತರ ಬ್ಯಾಂಕ್ ಖಾತೆಗಳಿಗೆ ಆರು ದಿನಗಳೊಳಗಾಗಿ ನೇರವಾಗಿ ಜಮೆ ಮಾಡಲಾಗುವುದು ಎಂದು ಶಿಂಧೆ ಭರವಸೆ ನೀಡಿದರು.

**"ರೈತರ ಸಹಕಾರಕ್ಕೆ ನಿರ್ದೇಶಕರ ಮನವಿ"**

ಕಬ್ಬಿನ ಕಟಾವು ಮತ್ತು ಸಾಗಣೆಯನ್ನು ಸಕಾಲದಲ್ಲಿ ನಿರ್ವಹಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಹೀಗಾಗಿ ಕಾರ್ಖಾನೆ ನಿಗದಿತ ಸಮಯದಲ್ಲಿ ಕಾರ್ಯಾರಂಭಿಸಲು ರೈತರು, ಕಟಾವು–ಸಾಗಣೆ ಗುತ್ತಿಗೆದಾರರು ಹಾಗೂ ಸಂಬಂಧಿಸಿದ ಎಲ್ಲರೂ ಸಹಕ–ರಿಸಬೇಕು ಎಂದು ಕಾರ್ಖಾನೆಯ ಪರಿಣಿತ ನಿರ್ದೇಶಕ ಜಿತೇಂದ್ರ ಧಾರು ಹೇಳಿದರು.

ಕಾರ್ಯಕ್ರಮದಲ್ಲಿ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶರದ್ ಮೊರೆ, ಅಮೋಲ ಶಿಂಧೆ, ಭರತ ತಾವರೆ, ರವೀಂದ್ರ ಗಾಯಕವಾಡ, ರವಿರಾಜ ಭೋಸಲೆ, ವೆಂಕಟೇಶ ರಾವ್, ಜಿತೇಂದ್ರ ಮೆಟಕರಿ, ಅನಿರುದ್ಧ ಪಾಟೀಲ, ವಿಜಯ ಹತ್ತೂರೆ, ರವೀಂದ್ರ ಬಿರಾಜದಾರ, ಸಂಗ್ರಾಮ್ ಸೂರ್ಯವಂಶಿ, ಸಚಿನ್ ನಿಕ್ಕಮ್, ಧನಂಜಯ ಪಾಟೀಲ, ವಿನಾಯಕ ಪೂಜಾರಿ, ಚಂದ್ರಕಾಂತ ಬಿರಾಜದಾರ, ಸಾವಕಾರ ಕೂಳೆಕರ ಸೇ–ರಿದಂತೆ ಕಾರ್ಖಾನೆಯ ಅಧಿಕಾರಿಗಳು, ಸಿಬ್ಬಂದಿ, ಕಬ್ಬು ಬೆಳೆಗಾರರು ಹಾಗೂ ಕಟಾವುಸಾಗಣೆ ಗುತ್ತಿಗೆದಾರರು ಉಪಸ್ಥಿತರಿದ್ದರು.

# ಬಿ.ಎಂ.ಪಾಟೀಲ್ ಪಬ್ಲಿಕ್ ಶಾಲೆಯಲ್ಲಿ ರಕ್ತದಾನ ಶಿಬಿರ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಗರದ ಬಿ. ಎಲ್. ಡಿ. ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ್ ಪಬ್ಲಿಕ್ ಸಿ. ಬಿ. ಎಸ್. ಇ. ಶಾಲೆಯಲ್ಲಿ ಶುಕ್ರವಾರ ರಕ್ತದಾನದ ಮಹತ್ವ ಸಾರುವ ವಿಶಿಷ್ಟ ಕಾರ್ಯಕ್ರಮ ನಡೆಯಿತು.

ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ ಅವರ ಜನ್ಮದನಿ ಮತ್ತು ಮಕ್ಕಳ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ನಡೆದ ಈ ರಕ್ತದಾನ ಶಿಬಿರ ಉದ್ಘಾಟಿಸಿದ ಬಿ. ಎಲ್. ಡಿ. ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ ಸಂಜೀವ ಬೆಂತೂರ ಮಾತನಾಡಿ, ಜೀವರಕ್,ಣೆಯಲ್ಲಿ ರಕ್ತದಾನದ ಮಹತ್ವವನ್ನು ವಿವರಿಸಿದರು. ಅಲ್ಲದೇ, ರಕ್ತದಾನ ಮಾಡುವುದರಿಂದ ಮನುಷ್ಯನ ಆರೋಗ್ಯವೂ ಉತ್ತಮವಾಗಿರುತ್ತದೆ ಎಂದು ಹೇಳಿದರು.

ಬಿ.ಎಲ್.ಡಿ.ಇ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಡಾ. ಸತೀಶ ಅರಕೇರಿ ಮಾತನಾಡಿ, ರಕ್ತದಾನ ಮತ್ತೊಬ್ಬರಿಗೆ ಜೀವದಾನ ಮಾಡಿದಂತೆ. ರಕ್ತದಾನದ ಬಗ್ಗೆ ಇರುವ ತಪ್ಪು ಮಾಹಿತಿಗಳಿಗೆ ಯಾರೂ ಕಿವಿಗೊಡಬಾರದು. ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಗಳು ನಿಯಂತ್ರಣದಲ್ಲಿರುವ ವ್ಯಕ್ತಿಗಳೂ ಕೂಡ ರಕ್ತದಾನ ಮಾಡಬಹುದು ಎಂದು ಹೇಳಿದರು.

ಶಾಲೆಯ ಪ್ರಭಾರಿ ಪ್ರಾಚಾರ್ಯೆ ವಸುಧಾ ನಾರ್ವೇಕರ್ ಮಾತನಾಡಿ, ಮಕ್ಕಳ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಈ ರಕ್ತದಾನ ಜಾಗೃತಿ ಮತ್ತು ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಮಕ್ಕಳು ಮತ್ತು ಪೋಷಕರು ಉತ್ಸಾಹದಿಂದ ಪಾಲ್ಗೊಂಡಿರುವುದು ಸಂತಸ ತಂದಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿ. ಎಲ್. ಡಿ. ಇ ಸಂಸ್ಥೆಯ ಆಡಳಿತಾಧಿಕಾರಿ ವಿಲಾಸ ಬಗಲಿ, ಡಾ. ಭಾಗ್ಯಶ್ರೀ, ಶಾಲೆಯ ಹಿರಿಯ ಕಾರ್ಯಸಂಯೋಜಕಿ ದೀಪಾ ಜಂಬೂರೆ, ಜಲನಗರ ಐ.ಸಿ.ಎಸ್.ಇ ಶಾಲೆಯ ಶಿಕ್ಷಕರ, ಪಾಲಕರು ಮುಂತಾದವರು ಉಪಸ್ಥಿತರಿದ್ದರು.

ಇದೇ ವೇಳೆ ಕೆಲವು ಪೋಷಕರು ರಕ್ತದಾನ ಮಾಡಿದರು. ಅಲ್ಲದೇ, ನವರಾತ್ರಿಯ ಐದನೇ ದಿನದ ಅಂಗವಾಗಿ ಮಹಿಳೆಯರಿಗೂ ಅರಿಷಿಣ ಕುಂಕುಮ ನೀಡಿ, ಉಡಿ ತುಂಬುವ ಕಾರ್ಯಕ್ರಮವೂ ನಡೆಯಿತು.

# 371(ಜೆ) ಹೋರಾಟಕ್ಕೆ ತಳವಾರ ಸಮಾಜ & ದಸಂಸ ಬೆಂಬಲ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಡಾ. ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ದಾಖಲಾಗಿರುವ ವಿಜಯಪುರ ಜಿಲ್ಲೆಯನ್ನು ಸಂವಿಧಾನದ 371(ಜೆ) ಸೌಲಭ್ಯ ಕಲ್ಪಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ನಗರದ ಬಸವೇಶ್ವರ ವೃತ್ತದ ಬಳಿ ಕಳೆದ 14 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಆಲಮೇಲ, ಸಿಂದಗಿ ತಳವಾರ ಸಮಾಜ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ಸದಸ್ಯರು ಬೆಂಬಲ ಸೂಚಿಸಿದರು.

ಕರ್ನಾಟಕ ದಸಂಸ ಜಿಲ್ಲಾ ಸಂಚಾಲಕ ಉಮೇಶ ದೊಡಮನಿ ಮಾತನಾಡಿ, ವಿಜಯಪುರ ಜಿಲ್ಲೆಯ ಸಿಂದಗಿ, ಇಂಡಿ, ಬಾಗೇವಾಡಿ, ಮುದ್ದೇಬಿಹಾಳ ತಾಲೂಕುಗಳು ಅತೀ ಹಿಂದೂಳಿದ ಪ್ರದೇಶಗಳೆಂದು ಡಾ ನಂಜುಂಡಪ್ಪ ವರದಿಯಲ್ಲಿ 371(ಜೆ) ಸೇರುವ ಎಲ್ಲ ಅರ್ಹತೆಗಳು ಇದ್ದರು ಕೈಬಿಟ್ಟಿರುವುದು ದುರಂತವೇ ಸರಿ. ಇತ್ತ ಮುಂಬೈ ಕರ್ನಾಟಕದ ಕೊನೆಯ ತಾಲೂಕು ಅತ್ತ ಕಲ್ಯಾಣ ಕರ್ನಾಟಕದ ಕೊನೆಯ ಊರುಗಳ ಪ್ರಜೆಗಳಾದ ನಾವುಗಳು ಒದ್ದವರ ಚಂಡುಗಳಾಗಿ ಸೌಲಭ್ಯ ವಂಚಿತರಾಗಿದ್ದೇವೆ ಅದಕ್ಕೆ ಈ ಬಾಗದ ಸರ್ವತೋಮುಖ ಅಭಿವೃದ್ಧಿ ಸೌಲಭ್ಯದ ವ್ಯಾಪ್ತಿಗೆ ಸೇರಿಸಬೇಕೆಂಬುದು ಈ ಭಾಗದ ಜನರ ಪ್ರಮುಖ ಬೇಡಿಕೆಯಾಗಿದೆ. ಕಾರಣ ಜಿಲ್ಲೆಯ ಜನಪ್ರತಿನಿಧಿಗಳು ಈ ವಿಷಯದಲ್ಲಿ ಆಸಕ್ತಿ ವಹಿಸಿ, ಅಗತ್ಯ ದಾಖಲೆಗಳೊಂದಿಗೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪ್ರಯತ್ನಿಸಬೇಕು ಎಂದು ಆಗ್ರಹಿಸಿದರು.

ನಿವೃತ್ತ ಶಿಕ್ಷಕರಾದ ಶರಣಪ್ಪ ಸುಂಗಠಾಣ, ಬಿ.ಎಸ್.ಬೂದಿಹಾಳ ಮಾತನಾಡಿದರು.

ಹೋರಾಟದ ಸಮಿತಿ ಶಿವು ಹತ್ತಿ, ಎಂ.ಎಂ.ಹಂಗರಗಿ, ರಂಗನಾಥ ತೋರ್ಫೆ, ಗುರುರಾಜ ಪಡಶೆಟ್ಟಿ, ಆನಂದ ಶಾಬಾದಿ, ಸಂಗಣ್ಣ ಬ್ಯಾಕೋಡ, ಪತ್ರಕರ್ತರಾದ ಪಂಡಿತ ಯಂಪೂರೆ, ಅಂಬರೀಶ ಸುಣಗಾರ, ಎಸ್.ಆರ್.ಪಾಟೀಲ, ಶಂಕರ ಮಲ್ಲೇದ ಸರ್, ದಸಂಸದ ಜಯಶ್ರೀ ನಾಟೀಕಾರ, ಶ್ರೀದೇವಿ ಅರಳಗುಂಡಗಿ, ಮಹಾದೇವಿ ಬಂಡಿವಡ್ಡರ, ರಿಯಾನಾ ಪತ್ತೇಪೂರ, ಶಾಹೀನ ನಾಯ್ಕ, ಮದಿನಾ ಕಾಲೇಬಾನ, ರೇಷ್ಮಾ ಕಲಾದಗಿ, ಶರಣಪ್ಪ ಮಳಗಿ, ಎನ್.ಎಂ.ಶಳ್ಳಗಿ, ಸತೀಶ ಹಿರೇಮಠ, ಸಿದ್ದಲಿಂಗಯ್ಯ ಹಿರೇಮಠ, ತಳವಾರ ಸಮಾಜದ ಮುಖಂಡರಾದ ಮಹಾಂತೇಶ ಯರನಾಳ, ಎಸ್.ಎಂ.ಬಿರಾದಾರ, ಎಸ್.ಬಿ.ತಳವಾರ, ಬಿ.ಡಿ.ಗೋಡೆಕರ, ಸಿ.ಎಸ್.ವಾಲೀಕರ, ಖಲೀಲ ಬಡಿಗೇರ, ಮಹಿಬೂಬ ವಾಲೀಕಾರ ಸೇರಿದಂತೆ ಅನೇಕರು ಉಪಸ್ಥಿತ–ರಿದ್ದರು.




**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR